ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-ಸಂಪುಟ:12 | ISSUE- ಸಂಚಿಕೆ: 350 | PAGE- ಪುಟ 8 | ಬುಧುವಾರ 22.01.2025 ಬೀದರ | RNI NO:KARKAN/2011/48371 | RS.ಬೆಲೆ 2/-

## ಕಲಬುರಗಿಯಲ್ಲೂ ಮಹಾತ್ಮಾ ಗಾಂಧೀಜಿ ವಿಶೇಷ ಪುತ್ಥಳಿ:ಖರ್ಗೆ




ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ,ಜ.21:, ಬೆಳಗಾವಿ ಸುವರ್ಣ ವಿಧಾನಸೌಧದ ಎದುರು ಗಾಂಧೀಜಿಯವರ ಪುತ್ಥಳಿಯ ಸ್ಥಾಪನೆಯಿಂದ ಈ ಭಾಗಕ್ಕೆ ಮಾತ್ರವಲ್ಲ; ಇಡೀ ಕರ್ನಾಟಕಕ್ಕೆಗೌರವತಂದಿದೆ.ಶೀಘ್ರ ಕಲಬುರಗಿಯಲ್ಲೂ ಕೂಡ ಮಹಾತ್ಮಾಗಾಂಧೀಜಿಯವರ ವಿಶೇಷ ಪುತ್ಥಳಿಯನ್ನು ಸ್ಥಾಪಿಸಲಾಗುತ್ತಿದೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಅವರು ಮಹಾತ್ಮಾ ಗಾಂಧೀಜಿಯವರಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ಜರುಗಿದಕಾಂಗ್ರೆಸ್ಅಧಿವೇಶನದ ಶತಮಾನೋತ್ಸವದಸವಿನೆನಪಿಗಾಗಿ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ಮಹಾತ್ಮಾಗಾಂಧೀಜಿಯವರ ಬೃಹತ್ ಪುತ್ಥಳಿಯನ್ನು ಚರಕ ತಿರುಗಿಸುವ ಮೂಲಕ ಇಂದು ಅನಾವರಣಗೊಳಿಸಿ ಮಾತನಾಡಿದರು.

ಸಂವಿಧಾನ ಹಾಗೂ ಪ್ರಜಾತಂತ್ರ ಇಲ್ಲದಿದ್ದರೆದೇಶದಲ್ಲಿ ಅರಾಜಕತೆ ಉಂಟಾಗುತ್ತಿತ್ತು. ಗಾಂಧೀಜಿಯವರು ದೇಶಕ್ಕೆ ನೀಡಿದ ಕೊಡುಗೆಯನ್ನು ಈಗ ಎಲ್ಲರೂ ಸ್ಮರಿಸುತ್ತಿದ್ದಾರೆ. ಗಾಂಧೀಜಿಯವರು ತಮ್ಮ ಅಧ್ಯಕ್ಷತೆಯಲ್ಲಿ 1924 ರಲ್ಲಿ ಜರುಗಿದ ಅಧಿವೇಶನದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಕರೆ ನೀಡಿದರು. ಆದ್ದರಿಂದ ಈ ನೆಲವು ಐತಿಹಾಸಿಕ ಮಹತ್ವವನ್ನು ಹೊಂದಿದೆ. 1924 ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳದಲ್ಲಿಯೇ ನೂರು ವರ್ಷದ ಬಳಿಕ ಪಕ್ಷದ ಕಾರ್ಯಕಾರಿಣಿ ಸಭೆ ನಡೆಸಿರುವುದು ಅತ್ಯಂತ ಮಹತ್ವದ್ದಾಗಿದೆ ಎಂದರು.

ನಂತರ ಮಾತನಾಡಿದ ಮುಖ್ಯಮಂತ್ರಿಸಿದ್ದರಾಮಯ್ಯನವರು, ಗಾಂಧೀಜಿಯವರು 1924 ರಲ್ಲಿ ಕಾಂಗ್ರೆಸ್ ನ ಐತಿಹಾಸಿಕ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.ಅವರಅಧ್ಯಕ್ಷತೆಯಲ್ಲಿ ಕರ್ನಾಟಕದಲ್ಲಿ ಅದರಲ್ಲೂ ಬೆಳಗಾವಿಯಲ್ಲಿನಡೆದಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದರು.

ಮಹಾತ್ಮಾಗಾಂಧೀಜಿಯವರು ಅಂದು ಅಸ್ಪೃಶ್ಯತೆ ನಿವಾರಣೆ, ಸಮಾನತೆ,ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ ಕುರಿತು ಪ್ರತಿಪಾದನೆ ಮಾಡಿದ್ದರು. ಗಾಂಧೀಜಿಯವರುಸದಾಶ್ರೀರಾಮನ ಸ್ಮರಣೆಮಾಡುತ್ತಿದ್ದರು. ಅವರು ಅಪ್ಪಟ ಹಿಂದೂ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ.


(2ನೇ ಪುಟ ನೋಡಿ)



ಬೀದರ: ಇಂದು ನಿಜ ಶರಣ ಅಂಬಿಗರ ಚೌಡಯ್ಯ ಜಯಂತಿ ನಿಮಿತ್ಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ನಿಜ ಶರಣ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ, ಜಿಲ್ಲಾ ಟೋಕರಿ ಕೋಳಿ ಸಮಾಜದ ಅಧ್ಯಕ್ಷ ಜಗನ್ನಾಥ ಜಮಾದಾರ, ಉಪಾಧ್ಯಕ್ಷ ಸುನೀಲ್ ಖಾಶಂಪುರ, ನಿಜಶರಣ ಅಂಬಿಗರ ಚೌಡಯ್ಯ ಯುವ ಸೇನೆ ಅಧ್ಯಕ್ಷ ಸುನೀಲ್ ಭಾವಿಕಟ್ಟಿ, ಶ್ರೀಕಾಂತ ಬಿ. ಕೋಲಿ, ಚಂದ್ರಕಾಂತ ಹಳ್ಳಿಖೇಡಕರ್, ಷಣ್ಮುಖಪ್ಪಾ ಶೇಖಪೂರ, ಶರಣಪ್ಪ ಅಣ್ಣಾಜಿ, ಗೋವಿಂದ ಜಾಲಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೊಪ್ಪಳದ ಸಂಗೀತಾ, ವಿಜಯನಗರದ ಅಂಜು, ಬಳ್ಳಾರಿಯ ಹನುಮಯ್ಯಗೆ ಪ್ರಶಸ್ತಿ







ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.21: ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಂಗಳೂರು ಮತ್ತು ಬೆಳಗಾವಿ ಜಿಲ್ಲಾ ಘಟಕ ಕೊಡಮಾಡುವ

(2ನೇ ಪುಟ ನೋಡಿ)

## ರೊಟ್ಟಿ ಮಾಡುವ ಸ್ಪರ್ಧೆ: ಶಕುಂತಲಾ ಯಡಹಳ್ಳಿ ಪ್ರಥಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.21:ತತ್ವಜ್ಞಾನಿ, ಮಹಾಯೋಗಿವೇಮನರಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದಲ್ಲಿ ಮಹಿಳೆಯರಿಗಾಗಿ ಜರುಗಿದ ರೊಟ್ಟಿ ಮಾಡುವ ಸ್ಪರ್ಧೆಯಲ್ಲಿ ಶಕುಂತಲಾ ರಾಘವೇಂದ್ರ ಯಡಹಳ್ಳಿ 30 ನಿಮಿಷದ ಅವಧಿಯಲ್ಲಿ ಉತ್ತಮವಾಗಿರುವ 26 ರೊಟ್ಟಿ ಮಾಡಿ ಪ್ರಥಮ ಬಹುಮಾನ ಪಡೆದರು.

ಗ್ರಾಮದ ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಈ ಸ್ಪರ್ಧೆಯಲ್ಲಿ 30 ಜನ ಮಹಿಳೆಯರು ಭಾಗವಹಿಸಿದ್ದರು. ನಿಗದಿತ 30 ನಿಮಿಷದ ಅವಧಿಯಲ್ಲಿ 25 ರೊಟ್ಟಿ ಮಾಡಿದ ವೆಂಕಮ್ಮ ಯಲ್ಲಪ್ಪ ಯಡಹಳ್ಳಿ ದ್ವಿತೀಯ, 27 ರೊಟ್ಟಿ ಮಾಡಿದ ಲಕ್ಷ್ಮೀ ರಾಜು ಗೆಣ್ಣೂರ ತೃತೀಯ ಹಾಗೂ 29 ರೊಟ್ಟಿ ಮಾಡಿದ ಭಾರತಿ ನೀಲಪ್ಪ ಮಲಘಾಣ ಚತುರ್ಥ ಬಹುಮಾನ ಪಡೆದರು.

ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಸಿರಿಧಾನ್ಯಗಳ ತಯಾರಿಸಲಾದ ಸಿಹಿ ಹಾಗೂ ಖಾರದ ಪದಾರ್ಥಗಳ ಸ್ಪರ್ಧೆಯಲ್ಲಿ ಅಕ್ಕಮಹಾದೇವಿ ಚಂದ್ರಶೇಖರ ಬಾಳಕ್ಕನವರ ಪ್ರಥಮ ಸ್ಥಾನ, ಮಹಾದೇವಿ ತಿಪ್ಪಣ್ಣ ಜೀರಗಾಳ ಮತ್ತು ಪಲ್ಲವಿ ವಿನೋದ ಬಾಳಕ್ಕನವರ

(2ನೇ ಪುಟ ನೋಡಿ)

## ಕಬ್ಬಿನ ಟ್ರ್ಯಾಕ್ಟರ್ ತಗುಲಿ ಬಸವಣ್ಣನವರ ಪ್ರತಿಮೆ ವಿರೂಪ: ಚಾಲಕನ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.21: ತಾಲ್ಲೂಕಿನ ದಾಡಗಿ ಕ್ರಾಸ್ ಸಮೀಪದ ಬಸವಣ್ಣನವರ ಪ್ರತಿಮೆಗೆ ಈಚೆಗೆ ಕಬ್ಬಿನ ಲೋಡ್ ಹೊತ್ತೊಯ್ಯುತ್ತಿದ್ದ ಟ್ರ್ಯಾಕ್ಟರ್ ತಗುಲಿ ಬಸವಣ್ಣನವರ ಪ್ರತಿಮೆ ವಿರೂಪಗೊಂಡಿದ್ದು, ಟ್ರ್ಯಾಕ್ಟರ್ ಚಾಲಕನನ್ನು ಬಂಧಿಸಲಾಗಿದೆ ಎಂದು ಖಟಕಚಿಂಚೋಳಿ ಪಿಎಸ್ಐ ಸುದರ್ಶನ ರೆಡ್ಡಿ ತಿಳಿಸಿದ್ದಾರೆ.

ಈ ಘಟನೆ ಸಂಬಂಧ ಸಿಸಿಟಿವಿ ಫೋಟೇಜ್ ಗಳನ್ನು ಪರೀಶೀಲಿಸಿದಾಗ ಅಂದು ಮಧ್ಯರಾತ್ರಿ ಆ ಮಾರ್ಗವಾಗಿ ಘೋಡವಾಡಿಯಿಂದ ಕಬ್ಬು ತೆಗೆದುಕೊಂಡು ಉದಗೀರ್ ಕಡೆಗೆ ಇದೊಂದೇ ಟ್ರ್ಯಾಕ್ಟರ್ ಸಾಗಿತ್ತು. ಈ ಟ್ರ್ಯಾಕ್ಟರ್ ತೆರಳಿದ ಸಂಪೂರ್ಣ ಮಾಹಿತಿ ಕಲೆ

(2ನೇ ಪುಟ ನೋಡಿ)

## ಬಸವ ಭಕ್ತರು ಶಾಂತಿ ಕಾಪಾಡುವಂತೆ ಮನವಿ




ಮಲ್ಲಮ್ಮನುಡಿ ವಾರ್ತೆ

ಭಾಲ್ಕಿ:ಜ.21: ತಾಲೂಕಿನದಾಡಗಿ ಕ್ರಾಸ್‌ರಸ್ತೆಯಲ್ಲಿನ ವಿಶ್ವಗುರು ಬಸವಣ್ಣನವರ ಪ್ರತಿಮೆ ಟ್ರ್ಯಾಕ್ಟರ್ ಚಾಲನ ನಿರ್ಲಕ್ಷ್ಯದಿಂದಭಗ್ನವಾಗಿದೆ. ಇದರಲ್ಲಿ ಯಾವುದೇ ಕಿಡಿಗೇಡಿಗಳು ಕೃತ್ಯ ಕಂಡುಬಂದಿಲ್ಲಎಂಬುದನ್ನು ಪೊಲೀಸ್ ಇಲಾಖೆಯ ತನಿಖೆಯಿಂದಗೊತ್ತಾಗಿದೆ. ಆರೋಪಿ ಚಾಲಕನನ್ನು

(2ನೇ ಪುಟ ನೋಡಿ)

## ಗಣರಾಜ್ಯೋತ್ಸವ ಅರ್ಥ ಪೂರ್ಣವಾಗಿ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಡಿಸಿ ಸೂಚನೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.21:76ನೇ ಗಣರಾಜ್ಯೋತ್ಸವಸಮಾರಂಭಕ್ಕೆ ಅಧಿಕಾರಿಗಳುಅಗತ್ಯಸಿದ್ಧತೆಗಳನ್ನು ಮಾಡಿಕೊಳ್ಳುವಂತೆಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ಅವರು ತಿಳಿಸಿದರು.

ಅವರು ಇತ್ತೀಚಿನ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲಿ 76ನೇ ಗಣರಾಜ್ಯೋತ್ಸವನ್ನುಆಚರಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆವಹಿಸಿಮಾತನಾಡಿದರು.

ಸಮಾರಂಭವನ್ನು ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುವುದು. ಜ. 26 ರಂದು ಬೆಳಿಗ್ಗೆ 9 ಗಂಟೆಗೆ ಪೋಲಿಸ್‌ಗ್ರೌಂಡ್‌ಮೈದಾನದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕಾ ಖರ್ಗೆ ಅವರು ಧ್ವಜಾರೋಹಣನೆರವೇರಿಸಲಿದ್ದು, ಶಾಲಾ ಮಕ್ಕಳು ಎನ್‌ಸಿಸಿ, ಪೊಲೀಸ್ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಂದ ಆಕರ್ಷಕ ಪಥಸಂಚಲನ, ಅಲ್ಲದೇ ನಾನಾ ಶಾಲಾ ಮಕ್ಕಳಿಂದಆಕರ್ಷಕಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲು ಕ್ರಮವಹಿಸಿ ಎಂದರು.

ಜಿಲ್ಲಾ ಕೇಂದ್ರದಲ್ಲಿ ಎಲ್ಲಾ ಕಚೇರಿಗಳಲ್ಲಿ ಹಾಗೂ ವಿದ್ಯಾ ಸಂಸ್ಥೆಗಳಲ್ಲಿ ಸಂಬಂಧಪಟ್ಟ ಕಚೇರಿ ಮುಖ್ಯಸ್ಥರು ಹಾಗೂ

(2ನೇ ಪುಟ ನೋಡಿ)



ಒಂದನೇ ಪುಟದಿಂದ

# ಗಾಂಧೀಜಿ ವಿಶೇಷ ಪುತ್ಥಳಿ:ಖರ್ಗೆ

ಅವರು ಎಂದೂ ಹಿಂದೂ ವಿರೋಧಿಯಾಗಿರಲಿಲ್ಲ; ಆದರೆ ಹಿಂದೂ ಧರ್ಮದಲ್ಲಿ ಸಮಾನತೆ ಮತ್ತು ಸಹೋದರತೆಯನ್ನು ಬಯಸಿದ್ದರು. "ಹೇ ರಾಮ್" ಎನ್ನುತ್ತಲೇ ಕೊನೆಯುಸಿರೆಳೆದರು. ಅಂತಹ ಮಹಾನ್ ವ್ಯಕ್ತಿಯ ಬಗ್ಗೆ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಕೂಡ ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ.ಸಂವಿಧಾನ ದುರ್ಬಲಗೊಳಿಸುವ ಪ್ರಯತ್ನ ನಿರಂತರವಾಗಿ ನಡೆದಿದೆ. ಅದಕ್ಕೆ ನಾವು ಆಸ್ಪದ ನೀಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕರೆ ನೀಡಿದರು.

ಇಂದಿನ ಯುವಜನತೆಗೆ ಹಾಗೂ ಮುಂದಿನ ಪೀಳಿಗೆಗೆ ಗಾಂಧೀಜಿಯವರ ವಿಚಾರಧಾರೆಯನ್ನು ತಲುಪಿಸುವ ಉದ್ಧೇಶದಿಂದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರು, "ಇದೊಂದು ಐತಿಹಾಸಿಕ ಕಾರ್ಯಕ್ರಮ; ಇದು ಕೇವಲ ಪುತ್ಥಳಿ ಅನಾವರಣ ಕಾರ್ಯಕ್ರಮ ಮಾತ್ರವಲ್ಲ. ಸ್ವಾತಂತ್ರ್ಯ ಯೋಧರಿಗೆ ಗೌರವಿಸುವ ಮತ್ತು ಸಂವಿಧಾನದ ಘನತೆ ಎತ್ತಿ ಹಿಡಿಯುವ ಪವಿತ್ರ ಕಾರ್ಯಕ್ರಮವಾಗಿದೆ" ಎಂದರು.

ಏಕೀಕರಣ ಕೂಡ ಗಾಂಧಿಜಿಯವರ ಪ್ರೇರಣೆ ದೊರೆತಿದೆ. ಏಕತೆ, ಸಮಾನತೆ ಕಾಪಾಡಿಕೊಂಡು ಗಾಂಧೀಜಿಯವರ ತತ್ವಾದರ್ಶಗಳನ್ನು ಪುನರ್ ಮನನ ಮಾಡಲು ಇದು ಸ್ಫೂರ್ತಿದಾಯಕವಾಗಿದೆ. ಗಾಂಧೀಜಿಯವರ ತತ್ವಗಳನ್ನು ಬದಿಗಿಟ್ಟು ಸದೃಢ ಭಾರತ ನಿರ್ಮಾಣ ಅಸಾಧ್ಯ. ಆದ್ದರಿಂದ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಎಲ್ಲರೂ ಒಗ್ಗೂಡಿಕೊಂಡು ಮುನ್ನಡೆಯಬೇಕಿದೆ. ರಾಮರಾಜ್ಯ ಮತ್ತು ಗ್ರಾಮರಾಜ್ಯ ಮಹಾತ್ಮಾ ಗಾಂಧೀಜಿಯವರ ಕನಸಾಗಿತ್ತು. ಪರಸ್ಪರ ಸಹೋದರತೆ, ತ್ಯಾಗ, ಪತ್ನಿಯ ತ್ಯಾಗವು ರಾಮರಾಜ್ಯದ ನೈಜ ಪರಿಕಲ್ಪನೆಯಾಗಿದೆ ಎಂದು ಸಭಾಧ್ಯಕ್ಷರಾದ ಯು.ಟಿ.ಖಾದರ್ ಹೇಳಿದರು.

ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿದ ಕಾನೂನು, ಸಂಸದೀಯ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಎಚ್.ಕೆ.ಪಾಟೀಲ ಅವರು, ಮಹಾತ್ಮಾ ಗಾಂಧೀಜಿಯ ಪ್ರತಿಮೆ ಅನಾವರಣ ಒಂದು ಅವಿಸ್ಮರಣೀಯ ಗಳಿಗೆಯಾಗಿದೆ. ವಿಗ್ರಹವಲ್ಲ ಚೈತನ್ಯದ ಹರವು ಎಂದು ಬಣ್ಣಿಸಿದ ಅವರು, ಪ್ರತಿಮೆಯು ಗಾಂಧೀಜಿ ಅನುಯಾಯಿಗಳಿಗೆ ಪ್ರೇರಣೆಯಾಗಲಿದೆ. ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ 1924 ರ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವು ಗಾಂಧಿ ಭಾರತಕ್ಕೆ ದಾರಿದೀಪವಾಗಲಿದೆ ಎಂದರು.

ಸಮಾರಂಭದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಾದ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವರಾದ ಜಿ.ಪರಮೇಶ್ವರ್, ಲೋಕೋಪಯೋಗಿ ಇಲಾಖೆ ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಉಪ ಸಭಾಧ್ಯಕ್ಷರಾದ ರುದ್ರಪ್ಪ ಲಮಾಣಿ, ಕಾಂಗ್ರೆಸ್ ಪಕ್ಷದ ಮುಖಂಡರಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಜೈರಾಮ್ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಗ್ರಾಮೀಣ ವಿವಿಗೆ "ಮಹಾತ್ಮಾ ಗಾಂಧೀಜಿ" ನಾಮಕರಣ:ಗದುಗಿನ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಯಲಯವನ್ನು "ಮಹಾತ್ಮಾ ಗಾಂಧೀಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ" ಎಂದು ಮರುನಾಮಕರಣ ಮಾಡುವುದರ ಜತೆಗೆ ನೂತನ ಲಾಂಛನವನ್ನು ಸಮಾರಂಭದಲ್ಲಿ ಬಿಡುಗಡೆಗೊಳಿಸಲಾಯಿತು.ಕುಲಪತಿ ಡಾ.ಸುರೇಶ್ ನಾಡಗೌಡರ ಉಪಸ್ಥಿತರಿದ್ದರು.

ವಿಶೇಷ ಅಂಚೆ ಚೀಟಿ–ಕೃತಿಗಳ ಬಿಡುಗಡೆ:ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಸವಿನೆನಪಿಗಾಗಿ ಗಾಂಧೀ ಭಾರತ ವಿಶೇಷ ಅಂಚೆ ಲಕೋಟೆಯನ್ನು ಕೂಡ ಬಿಡುಗಡೆಗೊಳಿಸಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಹೊರತರಲಾದ "ಗಾಂಧಿ ಭಾರತ–ಮರು ನಿರ್ಮಾಣ" ಹಾಗೂ ಉದಯ ಕಾಲ ಸಮೂಹದ ಗಾಂಧಿ ಬಿತ್ತಿದ ಬೆಳಕು ಪುಸ್ತಕಗಳನ್ನು ಗಣ್ಯರು ಬಿಡುಗಡೆಗೊಳಿಸಿದರು.

ಕರ್ನಾಟಕ ಏಕೀಕರಣ ಚಳವಳಿಗೆ ಪ್ರೇರಣೆಯಾಗಿದ್ದ ಹುಯಿಲಗೋಳ ನಾರಾಯಣರಾವ್ ಅವರು ರಚಿಸಿದ "ಉದಯವಾಗಲಿ ನಮ್ಮ ಚೆಲುವು ಕನ್ನಡ ನಾಡು" ಗೀತೆಯನ್ನು ಸಾಧ್ವಿನಿ ಕೊಪ್ಪ ಅವರು ಪ್ರಸ್ತುತಪಡಿಸಿದರು.

ಬಾನಂಗಳಕ್ಕೆ ಚಿಮ್ಮಿದ ರಂಗು:ಚರಕವನ್ನು ತಿರುಗಿಸುವ ಮೂಲಕ ಮಹಾತ್ಮಾಗಾಂಧೀಜಿಯವರ ಪ್ರತಿಮೆ ಅನಾವರಣಗೊಳಿಸಿದ ಕೂಡಲೇ ಬಾನಂಗಳಕ್ಕೆ ಚಿಮ್ಮಿದ ಬಣ್ಣದ ಚಿತ್ತಾರ ಮೂಡಿಸಿ, ಚಿತ್ತಾಕರ್ಷಕ ಕಾಮನಬಿಲ್ಲಿನ ವರ್ಣಗಳನ್ನು ಅರಳಿಸಿ, ಪಟಾಕಿ ಹಾರಿಸಿದ್ದು ಕಾರ್ಯಕ್ರಮದ ಮೆರುಗು ಹೆಚ್ಚಿಸಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಪರವಾಗಿ ಅತಿಥಿಗಳನ್ನು ಸನ್ಮಾನಿಸಿ, ಗೌರವಿಸಿದರು.

ಲೋಕೋಪಯೋಗಿ ಇಲಾಖೆ ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ವಂದಿಸಿದರು. ಬಿ.ಸಿ.ಭಾನುಮತಿ ಕಾರ್ಯಕ್ರಮವನ್ನು ನಿರೂಪಿಸಿದರು.

# ಶಕುಂತಲಾ ಯಡಹಳ್ಳಿ ಪ್ರಥಮ

ದ್ವಿತೀಯ, ಜ್ಯೋತಿ ಸಂತೋಷ ಚಿತ್ತರಗಿ ತೃತೀಯ ಮತ್ತು ಸುಮನ್ ಚೇತನ ಅರಿಷಿಣಗೋಡಿ ಚತುರ್ಥ ಸ್ಥಾನ ಪಡೆದರು.

ಎರಡೂ ಸ್ಪರ್ಧೆಗಳಿಗೆ ನಿರ್ಣಾಯಕರಾಗಿ ಬಾಗಲಕೋಟೆಯ ಅನುಸೂಯಾ ಪಾಟೀಲ, ಪ್ರೇಮಾ ನಾರಪ್ಪನವರ, ಲೋಕೇಶ್ವರಿ ಪರಡ್ಡಿ ಹಾಗೂ ಕಾವೇರಿ ಪರಡ್ಡಿ ಕಾರ್ಯನಿರ್ವಹಿಸಿದರು. ಮಹಿಳಾ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಇದ್ದರು.

# ಶಾಂತಿ ಕಾಪಾಡುವಂತೆ ಮನವಿ

ಈಗಾಗಲೇ ಬಂಧಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸ್ಪಷ್ಟನೆ ನೀಡಿದ್ದಾರೆ.

ಘಟನೆಯ ಬಗ್ಗೆ ನನಗೆ ಮಾಹಿತಿ ದೊರೆತ ಕೂಡಲೇ ಕ್ರಮ ವಹಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಹಾನಿಯಾಗಿರುವ ವಿಶ್ವಗುರು ಬಸವೇಶ್ವರರ ಪ್ರತಮೆಯ ಸ್ಥಳದಲ್ಲಿಯೇ ಹೊಸದಾಗಿ ಪ್ರತಿಮೆ ಸ್ಥಾಪಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದೇನೆ. ಹಾಗಾಗಿ ಜಿಲ್ಲೆಯ ಬಸವ ಭಕ್ತರು ಶಾಂತಿ ಕಾಪಾಡುವಂತೆ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ಪ್ರತಿಮೆ ವಿರೂಪ: ಚಾಲಕನ ಬಂಧನ

ಹಾಕಿದಾಗ. ಉದಗೀರ್ ನ ವಿಲಾಸ ಶುಗರ್ ಫ್ಯಾಕ್ಟರಿಯಲ್ಲಿ ಟ್ರ್ಯಾಕ್ಟರ್ ಪತ್ತೆಯಾಗಿತ್ತು. ಚಾಲಕನನ್ನು ವಿಚಾರಣೆಗೆ ಒಳಪಡಿಸಿದಾಗ ತನ್ನ ನಿರ್ಲಕ್ಷ್ಯದಿಂದಲೇ ಪ್ರತಿಮೆ ವಿರೂಪಗೊಂಡಿದೆ ಎಂದು ಒಪ್ಪಿಕೊಂಡಿದ್ದಾನೆ ಎಂದು ಪಿಎಸ್ಐ ಸುದರ್ಶನ ರೆಡ್ಡಿ ತಿಳಿಸಿದರು.

ಈ ಸಂಬಂಧ ಖಟಕ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂತಹ ಘಟನೆಗಳು ನಡೆಯದಂತೆ ತಡೆಯಲು ದಾಡಗಿ ಕ್ರಾಸ್ ಬಳಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ರಸ್ತೆ ಅಗಲೀಕರಣ ಕಾರ್ಯ ಹಾಗೂ ನೂತನ ಬಸವಣ್ಣನವರ ಮೂರ್ತಿ ಸ್ಥಾಪನೆ ಶೀಘ್ರದಲ್ಲಿ ಆಗಬೇಕು ಎಂಬುದು ಬಸವಭಕ್ತರ ಒತ್ತಾಯವಾಗಿದೆ.

ಮಂಗಳವಾರ (ಜ.14) ಮಧ್ಯರಾತ್ರಿ ಕಿಡಿಗೇಡಿಗಳು ನಿಂತಿರುವ ಬಸವಣ್ಣನವರ ಪ್ರತಿಮೆಯ ಬಲಗೈಯನ್ನು ಕತ್ತರಿಸಿ, ಷಟಸ್ಥಲ ಧ್ವಜ ಬೀಳಿಸಿ ವಿರೂಪಗೊಳಿಸಿದ್ದಾರೆ ಎಂದು ಆರೋಪಿಸಿ ಬುಧವಾರ ದಾಡಗಿ ಗ್ರಾಮಸ್ಥರು, ತಾಲ್ಲೂಕಿನ ಬಸವ ಭಕ್ಕರು ಸೇರಿಕೊಂಡು, ಹುಮನಾಬಾದ್–ಭಾಲ್ಕಿ–ಬಸವಕಲ್ಯಾಣ ಮಾರ್ಗದ ರಸ್ತೆ ಸಂಚಾರ ತಡೆದು, ಟೈರ್ ಗೆ ಬೆಂಕಿಹಚ್ಚುವ ಮೂಲಕ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆಯ ಕಾವು ಹೆಚ್ಚುತ್ತಿದ್ದಂತೆ ತಹಶೀಲ್ದಾರ್ ಮಲ್ಲಿಕಾರ್ಜುನ ವಡ್ಡನಕೇರಿ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿ ಪರಿಸ್ಥಿತಿ ತಿಳಿಗೊಳಿಸಿದ್ದರು.

# ಸಂಗೀತಾ, ವಿಜಯನಗರದ ಅಂಜು, ಬಳ್ಳಾರಿಯ ಹನುಮಯ್ಯಗೆ ಪ್ರಶಸ್ತಿ

ಪ್ರತಿಷ್ಠಿತ ಸಂಗೊಳ್ಳಿ ರಾಯಣ್ಣ ರಾಜ್ಯ ಯುವ ಪ್ರಶಸ್ತಿಗೆ ರಾಜ್ಯದ ಮೂವತ್ತೊಂದು ಜಿಲ್ಲೆಯ ಮೂವತ್ತೊಂದು ಜನರಿಗೆ ಮತ್ತು ಒಂದು ಸಂಘ ಪ್ರಶಸ್ತಿಯನ್ನು ಘೋಷಣೆ ಮಾಡಿ ರಾಜ್ಯ ಅಧ್ಯಕ್ಷ ಎಸ್. ಬಾಲಾಜಿ ಆದೇಶಿಸಿದ್ದಾರೆ.

ಕಲಬುರಗಿ ವಿಭಾಗದ ಕೊಪ್ಪಳದಿಂದ ಶಿಕ್ಷಣ ಕ್ಷೇತ್ರ ಮತ್ತು ಸಮಾಜ ಸೇವೆಗೆ ಸಂಗೀತಾ ಬಿ. ಕಲ್ಲೇಶ ಮೆಣೆದಾಳ, ವಿಜಯನಗರ ಜಿಲ್ಲೆಯಿಂದ ಅಂತರಾಷ್ಟ್ರೀಯ ಭರತನಾಟ್ಯ ಕಲಾವಿದೆ ಪಿ. ಅಂಜು, ಬಳ್ಳಾರಿ ಜಿಲ್ಲೆಯಿಂದ ಯುವ ಸಂಘಟನೆ ಮತ್ತು ಸಮಾಜ ಸೇವೆಗೆ ಹನುಮಯ್ಯ ದೊಡ್ಡಬಸಪ್ಪ ಜಿ., ಕಲಬುರಗಿಯಿಂದ ಚನ್ನವೀರ್ ಬಿ. ಕಣ್ಣಿಗಿ, ಬೀದರ ಜಿಲ್ಲೆಯ ರಾಜಕುಮಾರ ಮೋರೆ, ಯಾದಗಿರಿ ಜಿಲ್ಲೆಯ ನಿಂಗಣ್ಣ ದೇವಪ್ಪ ಲಾಠಿ ಮತ್ತು ರಾಯಚೂರ ಜಿಲ್ಲೆಯ ಮಹೇಶ್ ಕುಮಾರ್ ಅವರು ಆಯ್ಕೆಯಾಗಿದ್ದು ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕ ಹಳ್ಳೂರಿನ ಇಟ್ಟಪ್ಪ ದೇವರ ರಂಗ ವೇದಿಕೆಯಲ್ಲಿ ಜನೇವರಿ 27 ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಕಲಬುರಗಿ ವಿಭಾಗೀಯ ಸಂಚಾಲಕ ಮಂಜುನಾಥ ಜಿ. ಗೊಂಡಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಡಿಸಿ ಸೂಚನೆ

ಸಿಬ್ಬಂದಿ ವರ್ಗದವರು ಅಂದು ಬೆಳಿಗ್ಗೆ 7.30 ಗಂಟೆಗೆ ಧ್ವಜಾರೋಹಣ ಮಾಡಿ ಬೆಳಿಗ್ಗೆ 8.00 ಗಂಟೆ ಒಳಗಾಗಿ ಪೊಲೀಸ್ ಗ್ರೌಂಡ್‌ನಲ್ಲಿ ಸಾರ್ವಜನಿಕ ಧ್ವಜಾರೋಹಣದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಅಧಿಕಾರಿಗಳು ತಪ್ಪಿದಲ್ಲಿ ಶಿಸ್ತಿನ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದರು.

ಸಚಿವರಿಗೆ ಶಾಕರನ್ನು ಹಾಗೂ ಜಿಲ್ಲೆಯ ಪ್ರತಿನಿಧಿಗಳನ್ನು ಗಣ್ಯವ್ಯಕ್ತಿಗಳನ್ನು ಪತ್ರಕರ್ತರನ್ನು, ಹಿರಿಯ ಅಧಿಕಾರಿಗಳ ವರ್ಗದವರನ್ನು ವ್ಯವಸ್ಥಿತವಾಗಿ ಶಿಷ್ಠಾಚಾರದನ್ವಯ ಸೂಕ್ತ ಆಸನಗಳನ್ನು ನಿಗದಿಪಡಿಸಿಬೇಕು ಹಾಗೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಕರೆ ತರಲು ಶಾಲಾ ಶಿಕ್ಷಣ ಇಲಾಖೆ, ಮತ್ತು ಪದವಿ ಪೂರ್ವ ಕಾಲೇಜು ಉಪನಿರ್ದೇಶಕರಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಸಿದ್ಧತೆ ಕುರಿತು ಕ್ರೀಡಾಂಗಣದಲ್ಲಿ ಸ್ವಚ್ಛತೆ, ವೇದಿಕೆ ,ಶಾಮಿಯಾನ, ವ್ಯವಸ್ಥೆ ಕುರಿತಂತೆ ಸಂಬಂಧಸಿದ ಇಲಾಖೆ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ನಾಡು ನುಡಿ ಪ್ರೇಮ ಬಿಂಬಿಸುವ ನಾಡಗೀತೆ, ರೈತಗೀತೆ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸುತ್ತಪಡಿಸಬೇಕು ಪೋಲಿಸ ಇಲಾಖೆ ಅಗತ್ಯ ಬಂದೋಬಸ್ತ ಕೈಗೊಳ್ಳಬೇಕು ಹಾಗೂ ಯಾವುದೇ ಅವಘಡ ಸಂಭವಿಸದಂತೆ ಅಗ್ನಿಶಾಮಕ ದಳ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ವಿವಿಧ ಇಲಾಖೆಗಳಿಂದ ಪ್ರತ್ಯೇಕವಾಗಿ ಸಂಬಂಧಪಟ್ಟ ಇಲಾಖೆಗಳು ಟ್ಯಾಬ್ಲೊಗಳನ್ನು ಪ್ರದರ್ಶನವನ್ನು ಸರದಾರ ವಲ್ಲಭಬಾಯಿ ಪಟೇಲ ವೃತ್ತದ ವರೆಗೆ ತೆಗೆದುಕೊಂಡು ಹೋಗಬೇಕು ಅಧಿಕಾರಿಗಳಿಗೆ ಸೂಚಿಸಿದರು.

ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲು ತಮ್ಮ ತಮ್ಮ ಇಲಾಖೆಗಳಲ್ಲಿ ಸಾಧನೆ ಮಾಡಿದ ಸಿಬ್ಬಂದಿಗಳ ಯಾದಿಯನ್ನು ಒಂದು ವಾರದ ಮುಂಚೆ ಸಹಾಯಕ ಆಯುಕ್ತ ಕಲಬುರಗಿರವರಿಗೆ ನೀಡಲು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ತಿಳಿಸಲಾಯಿತು.

ಇಲಾಖೆಗಳಿಂದ ಬಂದ ಯಾದಿ ಹಾಗೂ ಸಾರ್ವಜನಿಕರು ಬಂದ ಮನವಿಗಳನ್ನು ಬಗ್ಗೆ ಪರಿಶೀಲಿಸಿ ಪ್ರಶಸ್ತಿ ನೀಡುವ ವ್ಯಕ್ತಿಗಳನ್ನು ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಸಹಾಯಕ ಆಯುಕ್ತರಿಗೆ ಸೂಚಿಸಲಾಯಿತು.

ಫಲಾನುಭವಿಗಳ ಪ್ರಸ್ತಾವನೆಯನ್ನು ತಯಾರಿಸುವ ಸಮಿತಿಯ ಕಲಬುರಗಿ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಂಪರ್ಕಿಸಿ ಫಲಾನುಭವಿಗಳಿಗೆ ವಿತರಿಸಬಹುದಾದ ಎಲ್ಲ ಸೌಲಭ್ಯಗಳನ್ನು ಪಟ್ಟಿಯನ್ನು ತಯಾರಿಸುವುದು ಈ ಸಮಿತಿಯಲ್ಲಿ ಒಳಗೊಂಡ ಅಧಿಕಾರಿಗಳು ಫಲಾನುಭವಿಗಳು ಪಟ್ಟಿಯನ್ನು ಸಿದ್ದಪಡಿಸುವ ಪ್ರಸ್ತಾವನೆಯ ಪಟ್ಟಿ ಸರಿಯಾಗಿ ಅಚ್ಚುಕಟ್ಟಾಗಿ ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು.

ಜನವರಿ 25 ಮತ್ತು 26 ರಂದು ನಗರದ ಎಲ್ಲಾ ಅಂಗಡಿ ಮುಗ್ಗಟುಗಳ ಮತ್ತು ವಿವಿಧ ಖಾಸಗಿ ಉದ್ದಿಮಿಗಳ ಕಟ್ಟಡಗಳ ಮಾಲೀಕರು ದೀಪಾಲಂಕಾರ ವ್ಯವಸ್ಥೆ ಮಾಡಿಕೊಳ್ಳುವಂತೆ ಕೋರಲು ಅಧ್ಯಕ್ಷರು ಹೈದ್ರಾಬಾದ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಇವರಿಗೆ ತಿಳಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

ಅದೇ ರೀತಿಯಾಗಿ ಮಿನಿ ವಿಧಾನ ಸೌಧ, ಶ್ರೀ ಮಹಾತ್ಮಾ ಗಾಂಧಿ, ಪ್ರತಿಮೆ, ಜಗತ್ ವೃತ್ತದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ, ಜಗತ್ ಜ್ಯೋತಿ ಬಸವಣ್ಣ ಪ್ರತಿಮೆ, ಶ್ರೀ ಬಾಬು ಜಗಜೀವನರಾಮ್ ಪ್ರತಿಮೆ, ಮತ್ತು ಸರದಾರ ವಲ್ಲಭಭಾಯಿ ಪಟೇಲ್, ಪ್ರತಿಮೆಗೆ ದೀಪಾಲಂಕಾರ ಮಾಡಲು ಆಯುಕ್ತರು ಮಹಾನಗರ ಪಾಲಿಕೆ ಆಯುಕ್ತರಿಗೆ ಹಾಗೂ ಸದರಿ ದಿನದಂದು ವಿದ್ಯುತ್ ಕಡಿತಗೊಳಿಸದಂತೆ ಕ್ರಮವಹಿಸಲು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರಿಗೆ ತಿಳಿಸಲಾಯಿತು.

ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ರಾಷ್ಟ್ರ ಧ್ವಜಕ್ಕೆ ಅವಮಾನ ಅಗದಂತೆ ಪ್ಲಾಸ್ಟಿಕ್ ಧ್ವಜಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿರುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಡಿಸಿಪಿ ಕನಿಕಾ ಸಿಕ್ರಿವಾಲ, ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಭಂವರ ಸಿಂಗ್ ಮೀನಾ, ಮಹಾನಗರ ಪಾಲಿಕೆ ಉಪಆಯುಕ್ತ ಅವಿನಾಶ ಶಿಂಧೆ,ಅಪರ ಜಿಲಾಧಿಕಾರಿ ರಾಯಪ್ಪ ಹುಣಸಗಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳಾದ ಕೃಷಿ ಜಿಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಮುನ್ನವರ ದೌವಲ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಸಮ್ಮದ್ ಪಟೇಲ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಸಂತೋಷ ಇನಾಂದಾರ, ಅನೇಕ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಪ್ಪಾರಾವ ಸೌದಿಗೆ ರಾಜ್ಯ ಪ್ರಶಸ್ತಿ ಪ್ರದಾನ



ಬೀದರ. ಜ. 21: ಕಲ್ಪತರು ನಾಡು, ಜಕಣಾಚಾರಿಗಳ ಬೀಡು, ಸಿದ್ದಗಂಗೆಯ ತವರೂರು ಆದ ತುಮಕೂರಿನ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ರಾಜ್ಯ ಘಟಕ ಹಾಗೂ ತುಮಕೂರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಗಳ ಜಂಟಿ ಆಶ್ರಯದಲ್ಲಿ ಶನಿವಾರ ಹಾಗೂ ಭಾನುವಾರ ಜರುಗಿದ 39ನೇ ಪತ್ರಕರ್ತರ ರಾಜ್ಯ ಸಮ್ಮೇಳನದಲ್ಲಿ ಭಾನುವಾರ ಸಂಜೆ ಪ್ರಶಸ್ತಿ ಪ್ರಧಾನ ಸಮಾರಂಭ ಜರುಗಿತ್ತು.

ಕನ್ನಡಪ್ರಭ ದಿನಪತ್ರಿಕೆಯ ಕಲ್ಬುರ್ಗಿ ಆವೃತ್ತಿಯ ಮುಖ್ಯಸ್ಥರಾದ ಹಿರಿಯ ಪತ್ರಕರ್ತ ಅಪ್ಪಾರಾವ ಸೌದಿ ಅವರಿಗೆ ಈ ವರ್ಷದ ರಾಜಕೀಯ ವಿಮರ್ಶಾತ್ಮಕ ಅತ್ಯುತ್ತಮ ವರದಿಗೆ ಖಾದ್ರಿ ಶಾಮಣ್ಣ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ ಪ್ರಭಾಕರ್, ಶಾಸಕರಾದ ಸುರೇಶ್ ಗೌಡ, ಸುರೇಶ ಬಾಬು, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಮುಖಂಡರಾದ ನಾಗರಾಜ, ಹಾಗೂ ಇತರೆ ರಾಜಕಾರಣಿಗಳು, ಹಿರಿಯ ಪತ್ರಕರ್ತರಾದ ಪಿ.ಸಾಯಿನಾಥ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ ಲೋಕೇಶ, ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್, ಪುಂಡಲೀಕ ಬಾಳೋಜಿ, ಅಜ್ಜಮಾಡ ರಮೇಶ ಕುಟ್ಟಪ್ಪ, ಕಾರ್ಯದರ್ಶಿಗಳಾದ ಸೋಮಶೇಖರ್ ಕೆರಗೋಡು, ನಿಂಗಪ್ಪ ಚಾವಡಿ, ಮತ್ತಿಕೆರೆ ಜಯರಾಮ್, ಖಜಾಂಚಿ ವಾಸುದೇವ ಹೊಳ್ಳ, ತುಮಕೂರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುರುಷೋತ್ತಮ, ಪ್ರಧಾನ ಕಾರ್ಯದರ್ಶಿ ರಘುರಾಮ, ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯ ಸಿದ್ದಲಿಂಗ ಸ್ವಾಮಿ, ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯ ಶರದ್ ಘಂ–ಟೆ, ಪತ್ರಕರ್ತರಾದ ಪ್ರದೀಪ ಬಿರಾದಾರ್, ಶಿವಕಾಂತ ಸ್ವಾಮಿ ಹಾಗೂ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು. ಪತ್ರಕರ್ತೆ ಸುಕನ್ಯಾ ಕಾರ್ಯಕ್ರಮ ನಿರೂಪಿಸಿದರು.

# ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿ ಆರಂಭ

ಕಲಬುರಗಿ,ಜ.21: ಕಲಬುರಗಿ ಜಿಲ್ಲೆಯಾದ್ಯಂತ ಪ್ರಸಕ್ತ 2024–25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ ಆರಂಭವಾಗಿದ್ದು, ಜಿಲ್ಲಾಯದ್ಯಂತ 177 ಖರೀದಿ ಕೇಂದ್ರಗಳನ್ನು ಗುರುತಿಸಿದೆ ಎಂದು ಜಿಲ್ಲಾಧಿಕಾರಿ ಬಿ.ಫೌ–ಜಿಯಾ ತರನ್ನುಮ್ ತಿಳಿಸಿದ್ದಾರೆ.

ಪ್ರಸಕ್ತ 2024–25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ ಎಫ್.ಎ.ಕ್ಯೂ. ಗುಣಮಟ್ಟದ 3,06,150 ಮೆಟ್ರಿಕ್ ಟನ್ ತೊಗರಿ ಖರೀದಿಗೆ ಸರ್ಕಾರ ಆದೇಶಿಸಿದೆ ಎಂದಿರುವ ಅವರು, ಜಿಲ್ಲೆಯಲ್ಲಿ ಈಗಾಗಲೆ ಗುರುತಿಸಿರುವ 177 ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳು ಅಥವಾ ರೈತ ಉತ್ಪಾದಕ ಸಂಘಗಳಲ್ಲಿ ತೊಗರಿ ಖರೀದಿಗೆ ನೊಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಖರೀದಿಗೆ 134 ಕೇಂದ್ರ ಮ್ಯಾಪಿಂಗ್ ಆಗಿದ್ದು, ಇನ್ನುಳಿದ 43 ಕೇಂದ್ರ ತುರ್ತಾಗಿ ಮ್ಯಾಪಿಂಗ್ ಮಾಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ತೊಗರಿಗೆ 7,550 ರೂ. ನಿಗದಿ ಮಾಡಲಾಗಿದ್ದು, ಪ್ರತಿ ಎಕರೆಗೆ 4 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಾಲ್ ಖರೀದಿಸಲಾಗುತ್ತದೆ. ಹಣವನ್ನು ಡಿ.ಬಿ.ಟಿ ಮೂಲಕ ರೈತರ ಬ್ಯಾಂಕ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಇನ್ನು ನ್ಯಾಫೆಡ್ ನಿಂದ ತೊಗರಿ ಖರೀದಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ಮತ್ತು ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯನ್ನು ನೋಡಲ್ ಏಜೆನ್ಸಿಗಳನ್ನಾಗಿ ನೇಮಿಸಿದ್ದು, ರೈತ ಬಾಂಧವರು ಇದರ ಲಾಭ ಪಡೆಯಬೇಕೆಂದು ಡಿ.ಸಿ. ಅವರು ಮನವಿ ಮಾಡಿದ್ದಾರೆ.

# ರಂಗೋಲಿ ಸ್ಪರ್ಧೆ–ಪದ್ಮಾವತಿ ಪ್ರಥಮ, ಸುನಿತಾ ಹೊಸೂರ ದ್ವಿತೀಯ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.21: ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಸೋಮವಾರ ಮಹಿಳೆಯರಿಗಾಗಿ ನಡೆದ ರಂಗೋಲಿ ಬಿಡಿಸುವ ಸ್ಪರ್ಧೆಯಲ್ಲಿ ಗುಳೇದಗುಡ್ಡ ತಾಲೂಕಿನ ಪರ್ವತಿಯ ಪದ್ಮಾವತಿ ಪೂಜಾರಿ ಪ್ರಥಮ ಸ್ಥಾನ ಪಡೆದರು.

ಮಹಾಯೋಗಿ ವೇಮನರ ಜಯಂತ್ಯೋತ್ಸವದ ಅಂಗವಾಗಿ ಸ್ಥಳೀಯ ಡಾ.ರಾಧಾಕೃಷ್ಣನ್ ಶಿಕ್ಷಕರ ಬಳಗ ಹಮ್ಮಿಕೊಂಡಿದ್ದ ಈ ಸ್ಪರ್ಧೆಯಲ್ಲಿ ಪುಟ್ಟ ಮಕ್ಕಳಾದಿಯಾಗಿ 30 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದು, ಪದ್ಮಾವತಿ ಪೂಜಾರಿ ಪ್ರಥಮ ಸ್ಥಾನ ಪಡೆಯುವ ಮೂಲಕ ಸತತ ಮೊದಲ ಬಹುಮಾನ ಪಡೆಯುವ ತಮ್ಮ ಪರಂಪರೆಯನ್ನು ಮುಂದುವರೆಸಿದರು.

ಸುನಿತಾ ಹೊಸೂರ ದ್ವಿತೀಯ, ಅಕ್ಷತಾ ಮಾದರ ತೃತೀಯ, ಶ್ರೇಯಾ ಹುಡೇದಮನಿ ಚತುರ್ಥ ಹಾಗೂ ಸವಿತಾ ಹಲಗಲಿ ಐದನೇ ಬಹುಮಾನ ಪಡೆದುಕೊಂಡರು. ಪುಟ್ಟ ಪುಟ್ಟ ಮಕ್ಕಳೂ ಸಹ ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದು ನೋಡುಗರ ಗಮನ ಸೆಳೆಯಿತು.

ನಂತರ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ನಿವೃತ್ತ ಶಿಕ್ಷಕರುಗಳಾದ ಎಂ.ವಿ.ಗೊರವರ ಮತ್ತು ಸಿ.ಎ.ಸನ್ನಪ್ಪನವರ, ರಂಗೋಲಿ ಭಾರತೀಯ ಸಂಸ್ಕೃತಿಯ ಒಂದು ಪ್ರಮುಖ ಭಾಗವಾಗಿದ್ದು, ಹಬ್ಬ ಹರಿದಿನಗಳಲ್ಲಿ ಪ್ರತಿ ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ ಸ್ವಾಗತಿಸುವ ಸಂಪ್ರದಾಯ ನಮ್ಮಲ್ಲಿದೆ. ಮಕ್ಕಳು ಈ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಗಂಗಾ ಹುಚ್ಚೇಶ ಯಡಹಳ್ಳಿ, ಮಲ್ಲಿಕಾರ್ಜುನ ಶಿವಾನಂದ ಅಂಗಡಿ, ಪ್ರಜ್ವಲ್ ಉಗಲವಾಟ ಮತ್ತು ವಿನೋದ ಶಿವಾನಂದ ಸುನಗದ ಅವರನ್ನು ಸತ್ಕರಿಸಿ ಪುರಸ್ಕಾರ ನೀಡಲಾಯಿತು. ನಿವೃತ್ತ ಶಿಕ್ಷಕರಾದ ಸಿ.ಎ.ಸನ್ನಪ್ಪನವರ, ಮುತ್ತುರಾಜ ಗೊರವರ ಹಾಗೂ ಬಿ.ವಾಯ್.ತಿಮ್ಮನಾಯ್ಕರ ಅವರನ್ನು ಸನ್ಮಾನಿಸಲಾಯಿತು.

ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷ ಪಂಡಿತ ಮಾಚಾ, ಸುರೇಶ ಚಿತ್ತರಗಿ, ಸಂಗಣ್ಣ ಪಾಟೀಲ, ಶಶಿಕಲಾ ಪಾಟೀಲ, ಮಾಲತೇಶ ಪಾಟೀಲ, ಟಿ.ಎಲ್.ಸನ್ನಪ್ಪನವರ, ಸುರೇಶ ಮನಗೂಳಿ, ಸಿ.ಎನ್.ಬಾಳಕ್ಕನವರ, ಪಾಂಡು ಸನ್ನಪ್ಪನವರ, ಅಶೋಕ ಅಂಗಡಿ, ವಂದನಾ ಪಾಟೀಲ, ವೆಂಕಟೇಶ ಹಿಪ್ಪಲಿ ಮತ್ತಿತರರು ಅತಿಥಿಗಳಾಗಿ ಪಾಲ್ಗೊಂಡಿದ್ದರು.

## ಕ.ರಾ.ರೈತ ಸಂಘದ ಜಿಲ್ಲಾ ಮಹಿಳಾ ಘಟಕ ಉದ್ಘಾಟನೆ ಮತ್ತು ನೂತನ ತಾಲೂಕು ಹಾಗೂ ಗ್ರಾಮ ಘಟಕದ ಉದ್ಘಾಟನೆ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜಿಲ್ಲೆಯ ಕನ್ನಡ ಭವನದಲ್ಲಿ ಜಿಲ್ಲಾ ಮಹಿಳಾ ಘಟಕ ಉದ್ಘಾಟನೆ ಹಾಗೂ ತಾಲೂಕು,ಗ್ರಾಮ ಘಟಕದ ಅಧ್ಯಕ್ಷರನ್ನು ಕ.ರಾ.ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷರಾದ ಶ್ರೀ ವಾಸುದೇವ ಮೇಟಿಯವರ ನೇತೃತ್ವದಲ್ಲಿ ನೇಮಕ ಮಾಡಿ ಆದೇಶ ಪ್ರತಿ ನೀಡಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಪ್ರಶಾಂತಗೌಡ ಮಾಲಿ ಪಾಟೀಲ್ ರವರು "ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ" ನಮ್ಮ ರೈತರು ಯಾವುದೇ ರೀತಿಯಾಗಿ ಬೆಳೆ ಬೆಳೆಯಲಿಲ್ಲವೆಂದರೆ ಇಡಿ ಜಗತ್ತೆ ಬಿಕ್ಕಿ-ಬಿಕ್ಕಿ ಮಣ್ಣು ತಿನ್ನುವ ಪರಿಸ್ಥಿತಿ ಬರುತ್ತೆ ಇಷ್ಟ ಅದಾಗ್ಯೂ ರೈತರ ಸಮಸ್ಯೆಗಳೇನು? ಅವರ ಬೆಳೆದ ಬೆಂಬಲ ಬೆಲೆಗೆ ಯಾಕೆ ಕೊಡಲಿ ಏಟು...? ಕಣ್ಣು ಕಾಣದ, ಕಿವಿಯೂ ಕೇಳದ ಸರ್ಕಾರಕ್ಕೆ ನಾವು ಮುಂಬರುವ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡಿ ತಕ್ಕ ಪಾಠ ಕಲಿಸುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ತಮ್ಮ ಪ್ರಾಸ್ತಾವಿಕ ನುಡಿಗೆ ವಿರಾಮ ಹೇಳಿದರು.

ಇದೇ ಸಂದರ್ಭದಲ್ಲಿ ಯಾದಗಿರಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಮಲ್ಲಣ್ಣಗೌಡ ಹಗರಟಗಿಯವರು ರೈತ ಮತ್ತು ಯೋಧ ಈ ದೇಶದ ಎರಡು ಕಣ್ಣು ಇದ್ದ ಹಾಗೆ ರೈತ ಕೈ ಬಿಟ್ಟರೆ..!ಮಣ್ಣುತಿನ್ನಬೇಕಾಗುತ್ತೆ,ಯೋಧ ಕೈ ಬಿಟ್ಟರೆ ಮಣ್ಣು ಸೇರಬೇಕಾಗುತ್ತೆ ಅದಕ್ಕೆ ರೈತರು ಮತ್ತು ಯೋಧರ ಸಮಸ್ಯೆಗಳು ಸರ್ಕಾರವು ಹಗುರವಾಗಿ ತಿಳಿಯದೇ ಸ್ಥಳದಲ್ಲೇ ಸಮಸ್ಯಗಳನ್ನು ಬಗೆಹರಿಸದಿದ್ದರೆ ಸರ್ಕಾರವೇ ಪಥನ ಮಾಡುತ್ತೇವೆ ಎಂದು ಮಾರ್ಮಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟಕರು ಹಾಗೂ ಜ್ಯೋತಿ ಬೆಳಗಿಸುವುದರೊಂದಿಗೆ ವೀರಶೈವ ಲಿಂಗಾಯತ್ ಮಹಾ ಸಭಾದ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀಮತಿ ದಿವ್ಯ ಹಾಗರಗಿಯವರು ರೈತ "ದೇಶದ ಬೆನ್ನೆಲುಬು" ರೈತರು ಸಮಸ್ಯೆಗಳನ್ನು ಎದುರಿಸಿ ಬೆನ್ನೆ ಭಾಗಿ ಹೋಗಿದೆ ಇದನ್ನು ಯಾರು ಸರಿ ಪಡಿಸುತ್ತಾರೆ ಎಂದು ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಯಕ್ಷ ಪ್ರಶ್ನೆ ಕೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಪರಮ ಪೂಜ್ಯ ಶ್ರೀ ಷ ಬ್ರ.ಗುರುಲಿಂಗ ಶಿವಚಾರ್ಯರು ಮತ್ತು ಶಾಂತವೀರ ಶಿವಾಚಾರ್ಯರು

ರೈತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಕೊನೆಯ ಘಟ್ಟದೊಂದಿಗೆ ಬೃಹತ್ ಹೋರಾಟ ಮಾಡಿ ಜಿಲ್ಲಾಧಿಕಾರಿಗಳಿಗೆ ರೈತರ ವಿವಿಧ ಬೇಡಿಕೆಗಳನ್ನು ಅತಿ ಶೀಘ್ರದಲ್ಲಿಯೇ ಬಗೆಹರಿಸುವಂತೆ ಜತೆಗೆ ಅನೇಕ ಸಮಸ್ಯೆಗಳಾದ ಮಲ್ಲಾಬಾದ ಏತ ನೀರಾವರಿಯ ಅಪೂರ್ಣ ಕಾಮಗಾರಿ ಯೋಜನೆ,ನೆಟೆರೋಗ,ಸಿಕ್ಸಲೈನ್ ಹೈವೆ ಚೆನ್ನೈ-ಕಲ್ಕತ್ತಾ ರೋಡ್ ಆಜು-ಬಾಜಿನ ಹದಗೆಡುತ್ತಿರುವ ಜಮೀನುಗಳು,ಭೂ ಒತ್ತುವರಿ ಕುರಿತು ಜಿಲ್ಲಾಧಿಕಾರಗಳಿಗೆ ಮನವಿ ಪತ್ರ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ರಾಜಕೀಯ ಧುರೀಣರು,ಮಾಜಿ ಪಿಕೆಪಿಎಸ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ರಾಜಶೇಖರಗೌಡ ಜೈನಾಪೂರ,ಜೇವರ್ಗಿ ತಾಲೂಕು ರೈತ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀ ಪಂಚಯ್ಯ ಹಿರೇಮಠ,ಕಾರ್ಯದರ್ಶಿಗಳಾದ ಅರುಣ,ಬರಹಗಾರರ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಪಾಟೀಲ್,ಅನಿಲ ಸಿಂಧೆ,ಮಿಥುನ್ ಬಾನ್ಸೋಡೆ,ನಾಗರಾಜ ಇಂಡಿ.

ನೂತನವಾಗಿ ಜಿಲ್ಲಾ ರೈತ ಸಂಘದ ಮಾಧ್ಯಮ ಪ್ರತಿನಿಧಿಯಾಗಿ ಶ್ರೀ ಚಂದ್ರಶಾಗೌಡ ಮಾಲಿ ಪಾಟೀಲ್ ಹಾಗೂ ಮಂದೇವಾಲ ಮತ್ತು ಮಯೂರ ಗ್ರಾಮ ಘಟಕದ ಅಧ್ಯಕ್ಷರಾದ ಶ್ರೀ ರಮೇಶಗೌಡ ಪಾಟೀಲ್ ಮತ್ತು ಮಲ್ಲಿನಾಥ ಜಿ ಪಾಟೀಲ್ ಹಾಗೂ ಇತರರನ್ನು ನೆಲೋಗಿ ರೈತ ಸಂಘದ ಹೋಬಳಿ ಘಟಕದ ಅಧ್ಯಕ್ಷರಾದ ಶ್ರೀ ಶರಣಗೌಡ ಮಾಲಿ ಪಾಟೀಲ್,ತಾಲೂಕು ಘಟಕದ ಅಧ್ಯಕ್ಷ ಪಂಚಯ್ಯ ಸ್ವಾಮಿ,ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಪ್ರಶಾಂತಗೌಡ ಮಾಲಿ ಪಾಟೀಲ್ ಹಾಗೂ ರಾಜ್ಯಾಧ್ಯಕ್ಷರಾದ ಶ್ರೀ ವಾಸುದೇವ ಮೇಟಿ ರವರು ನೇಮಕ ಮಾಡಿ ಆದೇಶ ಹೊರಡಿಸಿದರು.

## ಸುರೇಶ ಕಾಂಬಳೆ ಡಿಎಸ್ಎಸ್ ಜಿಲ್ಲಾ ಸಂಚಾಲಕರಾಗಿ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಇಂಡಿ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ರಿ), ಭಿಮವಾದ ರಾಜ್ಯ ಸಮಿತಿ ವಿಜಯಪುರ ಜಿಲ್ಲಾ ಸಂಚಾಲಕರನ್ನಾಗಿ ಸುರೇಶ್ ಕಾಂಬಳೆ ಅವರನ್ನು ನೇಮಕ ಮಾಡಿ ರಾಜ್ಯದ್ಯಕ್ಷರು ಡಾ ಆರ್ ಮೋಹನರಾಜ್ ಆದೇಶ ಪತ್ರಿಕೆ ವಿತರಿಸಿದ್ದಾರೆ.

ಸಂಘಟನೆಯ ನಿಯಮ ನಿಬಂಧನೆಗಳಿಗೆ ಒಳಪಟ್ಟು ಡಾ. ಬಿ.ಆರ್. ಅಂಬೇಡ್ಕರ್ ಅವರ ಹೋರಾಟದ ರಥವನ್ನು ಸಮಾನತೆ,ಸ್ವಾವಲಂಬಿ,ಸಾಮಾಜಿಕ ಸ್ವಾತಂತ್ರ್ಯ, ಮತ್ತು ಪ್ರಬುದ್ಧ ಭಾರತದೆಡೆಗೆ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ.

## ಅನಧಿಕೃತ ಜಾಗ ತೆರವುಗೊಳಿಸಿ- ಸುಗಮ ಸಂಚಾರಕ್ಕೆ ಅನುವು ಮಾಡಲು ಒತ್ತಾಯ





ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು : ಪಟ್ಟಣದಲ್ಲಿ ರಸ್ತೆ ಬದಿಯಲ್ಲೂ ಪುಟ್ ಬಾತ್ ವ್ಯಾಪಾರಿಗಳು ಜಾಗ ಆಕ್ರಮಿಸಿಕೊಳ್ಳುತ್ತಿರುವುದು ಆತಂಕಕಾರಿ ಸಂಗತಿ ಲಿಂಗಸೂಗೂರು ಹೊಸ ಬಸ್ ನಿಲ್ದಾಣ ಸರ್ಕಲ್ ಮತ್ತು ರಸ್ತೆ ,ರಾಯಚೂರು ನಿಂದ ಬೆಳಗಾವಿ ಹೆದ್ದಾರಿ ರಸ್ತೆ ವ್ಯಾಪಾರಿಗಳು ಟ್ರಾಫಿಕ್ ಜಾಮ್ ಉಂಟು ಮಾಡಿದರೆ ಮಾತ್ರ ಸಮಸ್ಯೆ ಉದ್ಭವಿಸುತ್ತದೆ. ಹೆಚ್ಚಿನ ಪುಟ್ ಬಾತ್ ಗಳು ಮತ್ತು ಪಾದಚಾರಿ ಮಾರ್ಗಗಳನ್ನು ದ್ವಿಚಕ್ರ ವಾಹನಗಳು ಬೀದಿ ವ್ಯಾಪಾರಿಗಳು ಆಕ್ರಮಿಸಿಕೊಂಡಿದ್ದಾರೆ ಸ್ಟಾಂಡ್ ಗಳನ್ನು ವಿಸ್ತರಿಸುವ ಟೀ ಸ್ಟಾಲ್ ಗಳು,ಇಡ್ಲಿ ,ಬಜ್ಜಿ ಬಂಡಿಗಳೂ ಪಾದಚಾರಿಗಳಿಗೆ ಬಹಳ ಕಡಿಮೆ ಜಾಗ ಬಿಟ್ಟಿದ್ದಾರೆ ಬೆಂಗಳೂರು ಬೈಪಾಸ್ ರಸ್ತೆಗೆ ಸೋಮವಾರದಂದು ಒಂದು ಲಘು ವಾಹನ ಲಾರಿ ಸಂಗೀತ ಬಾರ್ ಎದುರು ಹೆಣಗಾಡುತ್ತಿದೆ. ಮತ್ತು ಪಾದಚಾರಿಗಳು ಸುಗಮ ನಡೆಗಾಗಿ ಹಾತೊರೆಯುತ್ತಿದ್ದಾರೆ. ಈ ರಸ್ತೆಗಳಲ್ಲಿ ಸಂಚರಿಸಲು ಪಾದಚಾರಿಗಳು ಭಯಪಡುತ್ತಾರೆ.

ಬೀದಿ ಬದಿ ವ್ಯಾಪಾರಿಗಳು ಪುಟ್ ಬಾತ್ ಗಳನ್ನು ತಡೆಯುದನ್ನು ಸರ್ಕಾರ ಬಯಸಿದ್ದರೆ ಸರ್ಕಾರ ಅವರಿಗೆ ಪರ್ಯಾಯ ವವ್ಯಸ್ಥೆ ಮಾಡಬೇಕು ಎಂದು ಸಾರ್ವಜನಿಕ ಮಲ್ಲಣ್ಣ ಹೇಳಿದರು.ಈಗಾದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರಾ ನೋಡೋಣ

## ಗ್ರಾಮ ಸಂಚಾರದಲ್ಲಿ ಶಾಸಕ ಪ್ರಭು ಚವ್ಹಾಣ ಅವರಿಂದ 2 ಕೋಟಿಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ಗ್ರಾಮ ಸಂಚಾರ ಮುಂದುವರೆಸಿದ್ದು, ಸೋಮವಾರರಂದು ಖೇರ್ಡಾ, ಭಂಡಾರಕುಮಟಾ,ಧೋಪರವಾಡಿ, ಹಂದಿಕೇರಾ, ಚಿಮ್ಮೇಗಾಂವ, ಮಾಳೆಗಾಂವ,ಭೊಪಾಳಘಡ್, ಬೆಳಕುಣಿ(ಬಿ), ಭವಾಜಿ ಬಿಜಲಗಾಂವ, ಸಂಗನಾಳ ಸೇರಿದಂತೆ ವಿವಿಧ ಗ್ರಾಮಗಳಿಗೆ ಬೇಟಿ ನೀಡಿ ಸುಮಾರು 2 ಕೋಟಿ ಮೊಟ್ಟದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಖೇರ್ಡಾದಲ್ಲಿ 15 ಲಕ್ಷದ ಹೈಮಾಸ್ಟ್ ದೀಪ ಕಾಮಗಾರಿ, 15 ಲಕ್ಷದ ಸಮುದಾಯ ಭವನ, ಭಂಡಾರಕುಮಟಾನಲ್ಲಿ 10 ಲಕ್ಷದ ಸಿಸಿ ರಸ್ತೆ, 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ, 5 ಲಕ್ಷದ ಸಮುದಾಯ ಭವನ, ಧೋಪರವಾಡಿಯಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಕಾಮಗಾರಿ, ಹಂದಿಕೇರಾದಲ್ಲಿ 9 ಲಕ್ಷದ ಸಮುದಾಯ ಭವನ ಮುಂದುವರೆದ ಕಾಮಗಾರಿ, ಚಿಮ್ಮೇಗಾಂವನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಕಾಮಗಾರಿ, ಮಾಳೆಗಾಂವನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ,22.50 ಲಕ್ಷದ ಅಂಗನವಾಡಿ ಕಟ್ಟಡ, 5 ಲಕ್ಷದ ಸಿಸಿ ರಸ್ತೆ, ಭೊಪಾಳಘಡ್ ನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ, ಬೆಳಕೋಣಿ(ಬಿಹೆಚ್)ನಲ್ಲಿ 20 ಲಕ್ಷದ ಸಮುದಾಯ ಭವನ, ಸಂಗನಾಳ ಗ್ರಾಮದಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಅಹವಾಲು ಸ್ವೀಕಾರದ ವೇಳೆ ಗ್ರಾಮಸ್ಥರು ಒಬ್ಬೊಬ್ಬರಾಗಿ ತಮ್ಮ ಗ್ರಾಮದಲ್ಲಿನ ಮತ್ತು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಬಳಿಕ ಗ್ರಾಮದಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಮಾಹಿತಿ ನೀಡಿದರು. ಎಲ್ಲರ ಸಮಸ್ಯೆಗಳನ್ನು ಶಾಂತತೆಯಿಂದ ಆಲಿಸಿದ ಶಾಸಕರು, ಪಡಿತರ, ಪಿಂಚಣಿ ಸಮಸ್ಯೆ, ಬಸ್ ಸಮಸ್ಯೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಹಲವು ಸಮಸ್ಯೆಗಳಿಗೆ ಸ್ಪಂದಿಸಿದರು. ಕಾಲಮಿತಿಯಲ್ಲಿ ಕೆಲಸ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಬೇಕು. ಗ್ರಾಮಗಳಲ್ಲಿ ಇನ್ನು ಏನೇನು ಕೆಲಸಗಳಾಗಬೇಕು ಎನ್ನುವುದನ್ನು ಖುದ್ದಾಗಿ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಇಡೀ ಕ್ಷೇತ್ರದಲ್ಲಿ ಗ್ರಾಮ ಸಂಚಾರ ನಡೆಸುತ್ತಿದ್ದೇನೆ. ಅಧಿಕಾರಿಗಳು ಜೊತೆಗೆ ಪ್ರವಾಸ ಮಾಡುತ್ತಿದ್ದು, ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸುವ ಕೆಲಸವಾಗುತ್ತಿದೆ. ಗ್ರಾಮಸ್ಥರ ಮನವಿಗಳ ಪೈಕಿ ಆದ್ಯತೆಗೆ ಅನುಗುಣ ಹಂತ ಹಂತವಾಗಿ ಎಲ್ಲ ಕೆಲಸಗಳನ್ನು ಮಾಡಿಕೊಡಲಾಗುತ್ತದೆ ಎಂದು ಭರವಸೆ ನೀಡಿದರು.

ಕಂದಾಯ, ಕೃಷಿ, ತೆ-ೂಟಗಾರಿಕೆ, ಜೆಸ್ಕಾಂ, ಆಹಾರ ಮತ್ತು ನಾಗರಿಕ ಸರಬರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕುಡಿಯುವ ನೀರು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಪೊಲೀಸ್, ಕೆಎಸ್ಆರ್ಟಿಸಿ, ಗ್ರಾಮ ಪಂಚಾಯಿತಿ ಸೇರಿದಂತೆ ಕೆಲವೊಂದು ಇಲಾಖೆಗಳು ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಿರುತ್ತದೆ. ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾಗಿ ಕೆಲಸ ಮಾಡಿದರೆ ಪ್ರಮುಖ ಸಮಸ್ಯೆಗಳೇ ನಿವಾರಣೆಯಾಗುತ್ತವೆ. ಹಾಗಾಗಿ ಎಲ್ಲ ಅಧಿಕಾರಿಗಳು ಗ್ರಾಮಗಳ ಅಭಿವೃದ್ಧಿಯತ್ತ ಒಲವು ತೋರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಲಶೆಟ್ಟಿ ಚಿದ್ರೆ,ಅಮಿತಕುಮಾರ ಕುಲಕರ್ಣಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ,ಧೊಂಡಿಬಾ ನರೋಟೆ, ವಸಂತ ಬಿರಾದಾರ, ಶಿವರಾಜ ಅಲ್ಮಾಜೆ, ಯಶೋಧಾಬಾಯಿ ಚವ್ಹಾಣ, ರಾಜಕುಮಾರ ಪೋಕಲವಾರ,ಯಾದವರಾವ ಸಗರ, ಮಂಜು ಸ್ವಾಮಿ, ಮೃತ್ಯುಂಜಯ ಬಿರಾದಾರ, ಅನೀಲ ಬಿರಾದಾರ, ಕೊಂಡಿಬಾ ಬಿರಾದಾರ, ಸಚಿನ ಬಿರಾದಾರ, ಸಂಜು ಪಾಟೀಲ, ಅಶೋಕ ದೇಶಮುಖ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸುಭಾಷ, ಜೆಸ್ಕಾಂ ರವಿ ಕಾರಬಾರಿ, ಆರೋಗ್ಯಾಧಿಕಾರಿ ಡಾ.ಗಾಯತ್ರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ರಾಂಪುರೆನಲ್ಲಿ ಸಂಭ್ರಮದ ಲಕ್ಷ್ಮಿದೇವಿ ಜಾತ್ರೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ತಾಲೂಕಿನ ರಾಂಪುರೆ ಗ್ರಾಮದಲ್ಲಿ ಅನಿಲಕುಮಾರ ಪಾಟೀಲ ಹಾಗೂ ಶಿವಕುಮಾರ ರಾಂಪುರೆ ಅವರ ಹೊಲದಲ್ಲಿ ಇರುವ ಲಕ್ಷ್ಮಿ ಮಂದಿರದಲ್ಲಿ

ಮಂಗಳವಾರ ಲಕ್ಷ್ಮಿದೇವಿ ಜಾತ್ರೆ ನಡೆಯಿತು.

ಮಂಗಳವಾರ ಬೆಳಗ್ಗೆ ಲಕ್ಷ್ಮಿದೇವಿ ಪೂಜೆ ನೆರವೇರಿಸಲಾಯಿತು, ಗ್ರಾಮದ ಕಷ್ಟಗಳನ್ನು ಬಗ್ಗೆಹರಿಸಿ ಸಂತೋಷ ಸಮೃದ್ಧಿ ನೀಡಲೆಂದು ತಾಯಿಗೆ ವಿಶೇಷ ಪೂಜೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಜುಕುಮಾರ ರಾಂಪುರೆ ಮಾತನಾಡಿ ಪ್ರತಿ ವರ್ಷ ನಮ್ಮ ಶಿವಾರಿನಲ್ಲಿ ಲಕ್ಷ್ಮಿದೇವಿ ಜಾತ್ರೆಗೆ ಡಿಗ್ಗಿ, ರಾಂಪುರೆ, ಕಮಲನಗರ, ಕೋಟಾಗ್ಯಾಳ, ಹಕ್ಯಾಳ ಗ್ರಾಮದ ಬಂದು ಮಿತ್ರರು ಸದ್ದ ಭಕ್ತರು ಬಂದು ವಿಶೇಷ ಪ್ರಸಾದವಾದ ಎನ್ನಹೊಳಗಿ, ಗೋದಿ ಹುಗ್ಗಿ, ಅನ್ನ, ಅಮಲಿ ಊಟ ಸವಿದು ಜಾತ್ರೆಯನ್ನ ಯಶಸ್ವಿ ಮಾಡುವರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು, ಹಿರಿಯರು ಮಕ್ಕಳು ಯುವಕರು ಎಲ್ಲರೂ ಭಾಗಿಯಾಗಿ ದೇವಿಯ ದರ್ಶನ ಪಡೆದರು. ಶಿವಕುಮಾರ ರಾಂಪುರೆ, ಸಂಗಮನಾಥ ಬಿರಾದಾರ, ರಾಜಕುಮಾರ ಕುಂಬಾರಗಿರೆ, ವಿಜಯಕುಮಾರ ಬನವಾಸೆ, ಸುನಿಲ ಚಾಂಡೇಶ್ವರೆ, ವಿಷ್ಣು ರಾಂಪುರೆ,ಸಚಿನ ಬಿರಾದಾರ, ನಾಗರಾಜ ಸ್ವಾಮಿ, ವಿರಾಟ ಪಾಟೀಲ, ಪತ್ರಕರ್ತ ಪರಮೇಶ ರಾಂಪುರೆ ಸೇರಿದಂತೆ ಅನೇಕರು ಸೇರಿದರು.

## ಶರಣಪ್ಪ ಗದಲೇಗಾಂವರವರಿಗೆ ಗೌರವ ಡಾಕ್ಟರೇಟ್



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಕರ್ನಾಟಕದ ಕಿರಿಟ ಭಾಗವೆಂದೇ ಪ್ರಸಿದ್ಧಿ ಪಡೆದ ಜಿಲ್ಲೆಯ ತಾಲೂಕಿನ ಹೆಮ್ಮೆಯ ಶಿಕ್ಷಕರಾದ ಶರಣಪ್ಪ ಗದಲೇಗಾಂವ ಅಪ್ಪಟ ಕನ್ನಡಿಗ ಗಡಿ ನಾಡಿನಲ್ಲಿ ಕನ್ನಡದ ನೆಲ, ಜಲ, ನುಡಿ, ಸಂಸ್ಕೃತಿ, ಸಾಹಿತ್ಯ, ಶೈಕ್ಷಣಿಕ ಮತ್ತು ಸಾಮಾಜಿಕ ಚಿಂತಕ, ಸಮಾಜ ಸೇವೆ ಹಾಗೂ ಅನೇಕ ಸಮಸ್ಯೆಗಳನ್ನು ಪರವಾಗಿ ಹೋರಾಟದೊಂದಿಗೆ ತಾಲೂಕಿನಲಿ ಪ್ರಾಂತ್ಯದಲ್ಲಿ ಅನೇಕ ಸಾಮಾಜಿಕ ಸಾಂಸ್ಕೃತಿಕ ಕನ್ನಡ ಸಮಾರಂಭ ಆಯೋಜನೆ ಮಾಡುತ್ತಾ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಕನ್ನಡ ಹೋರಾಟಗಾರರಾದ ಶರಣಪ್ಪ ಕೆ. ಗದಲೇಗಾಂವ ರವರಿಗೆ ತಮಿಳುನಾಡಿನ ಆಸೀಯನ್ ಅಂತರಾಷ್ಟ್ರೀಯ ಸಾಂಸ್ಕೃತಿಯ ಸಂಶೋಧನೆ ವಿಶ್ವವಿದ್ಯಾಲಯ ಇವರ ಸಾಮಾಜಿಕ ಕೊಡುಗೆಯನ್ನು ಗುರುತಿಸಿ ಇತ್ತೀಚಿಗೆ ಬೆಂಗಳೂರಿನಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಶರಣಪ್ಪ ಗದಲೇಗಾಂವ ಮೂಲತ ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿಗೆ ಬರುವ ಗದಲೇಗಾಂವ (ಬಿ) ಗ್ರಾಮದ ವರು ಇವರು ಬಡಕುಟುಂಬದಲ್ಲಿ ಜನಸಿದರು. ಜೀವನದಲ್ಲಿ ಬಡತನ ಹೋಗಲಾಡಿಸಿ ಮುಂದೆ ಬರಬೇಕಾದರೆ ಅದು ಶಿಕ್ಷಣ ಒಂದೇ ಮಾರ್ಗ ಎಂದು ತಿಳಿದು, ಉನ್ನತ ಶಿಕ್ಷಣ ಮುಗಿಸಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾ ಶೈಕ್ಷಣಿಕ ಮತ್ತು ಸಾಹಿತ್ಯಿಕ ರಾಷ್ಟ್ರೀಯ ಕಾರ್ಯಕ್ರಮಗಳು ಶೈಕ್ಷಣಿಕ ಕಾರ್ಯಾಗಾರಗಳು ಅನೇಕ ಮಾದರಿಯ ಕಾರ್ಯಕ್ರಮಗಳು ನೀಡಿದ ಹೆಗ್ಗಳಿಕೆ ಅವರದ್ದು, ಸದರಿಯವರಿಗೆ ಈಗಾಗಲೇ ಅನೇಕ ಸರ್ಕಾರ ಮತ್ತು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಲಭಿಸಿವೆ.

ಬಡತನದಲ್ಲಿ ಶಿಕ್ಷಣ ಪಡೆದು ವಿಶೇಷ ಸಾಧನೆಗೈದು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಪೂಜ್ಯ ತಂದೆ ತಾಯಿಯವರಿಗೆ ಅರ್ಪಿಸುವುದಾಗಿ ತಿಳಿಸಿರುತ್ತಾರೆ.

ಪ್ರಶಸ್ತಿ ಪಡೆದಿದ್ದಕ್ಕಾಗಿ ಕನ್ನಡ ಜಾನಪದ ಪರಿಷತ್ ಅಧ್ಯಕ್ಷರಾದ ಡಾ. ಬಸವರಾಜ ಸ್ವಾಮಿ. ಸಾಹಿತಿಗಳಾದ ಮಚೇಂದ್ರ ಅರಣಕಲ್. ಸಿದ್ದರಾಮ ರಾಜಮಾನೆ. ಬಿ.ಐ.ಈ.ಆರ್.ಟಿಗಳ ಸಂಘ, ಅಶೋಕ ಸಿಂಧೋಲ ಬೀದರ್, ಸಂಜೀವಕುಮಾರ ನಡುಕರ್, ಬಾಲಕೃಷ್ಣ ಪಾಟೀಲ, ರಾಜು ಹೊಸಮನಿ ಸೇರಿದಂತೆ ಅನೇಕರು ಹರ್ಷ ವ್ಯಕ್ತಪಡಿಸಿದ್ದಾರೆ.

## ನಿರಂತರ ಪರಿಶ್ರಮದಿಂದ ಮಾತ್ರ ಗುರಿ ತಲುಪಲು ಸಾಧ್ಯ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್: ವಿದ್ಯಾರ್ಥಿಗಳು ಕುಗ್ಗದೆ ಉತ್ಸಾಹದಿಂದ ವಿದ್ಯಾಭ್ಯಾಸ ಮಾಡಬೇಕು' ಎಂದು ಶಾಸಕ ಡಾ. ಸಿದ್ದು ಪಾಟೀಲ ಹೇಳಿದರು.

ತಾಲ್ಲೂಕಿನ ಮಾಣಿಕ್ ನಗರದಲ್ಲಿ ಭಾನುವಾರ ಶ್ರೀರಾಮ್ ಸೇವಾ ಸಂಕಲ್ಪ ವತಿಯಿಂದ ನಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಪ್ರತಿಯೊಬ್ಬರ ಜೀವನದಲ್ಲಿ ಕಷ್ಟ-ಸುಖ ಸಾಮಾನ್ಯ. ಇದೆಲ್ಲವನ್ನು ಮೆಟ್ಟಿನಿಂತು ನಿಮ್ಮ ಹೆತ್ತವರಿಗೆ ಆಶ್ರಯರಾಗಬೇಕು' ಎಂದರು.

ವಿಧಾನ ಪರಿಷತ್ ಸದಸ್ಯ ಈ ಡಾ.ಚಂದ್ರಶೇಖರ ಪಾಟೀಲದ್ಧ ಮಾತನಾಡಿ, ಬಡ ಮತ್ತು ಲಾರಿಕ್ಷ ಚಾಲಕರ ಮಕ್ಕಳಿಗೆ ಧನ ಸಹಾಯ ರು ಮಾಡುತ್ತಿರುವುದು ಅತ್ಯಂತ ದ್ ಶ್ಲಾಘನೀಯ. ವಿದ್ಯಾರ್ಥಿಗಳು ಪ್ರೋತ್ಸಾಹ ಧನವನ್ನು ಬಳಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಬೇಕು. ನೀವು ಸಹ ಇತರರಿಗೆ ನೆರವಾಗುವಂಥ ಕೆಲಸ ಮಾಡಬೇಕು' ಎಂದರು.

ಮಾಜಿ ಶಾಸಕ ಸುಭಾಷ ಕಲ್ಲೂರ್ ಮಾತನಾಡಿ, 'ಪ್ರತಿಯೊಂದು ಸಂಸ್ಥೆಯೂ ಖಾಸಗಿ ಇಂಥ ಸಾಮಾಜಿಕ : ಕಾರ್ಯಗಳನ್ನು ಮಾಡಬೇಕು' ಎಂದು ಹೇಳಿದರು.

ಹುಮನಾಬಾದ್ ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕಾ ವೀರಗಂಗಾಧರ ಶಿವಾಚಾರ್ಯರು ಹಾಗೂ ಶಂಕರ್ ಲಿಂಗ ಮಹಾರಾಜರು ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಯಾಂಕ್ ರೆಡ್ಡಿ, ಪಂಚಾಕ್ಷರಪ್ಪ ಜೆ., ಸಮದ್ ಎಂ, ಸಂಸ್ಥೆಯ ಹುಮನಾಬಾದ್. ಶಾಖೆ-ಯ ವ್ಯವಸ್ಥಾಪಕ ಜಗನ್ನಾಥ ಬುಜುರುಕ್, ಚನ್ನೇಗೌಡ, ಪ್ರಲ್ಹಾದ ಕುಲಕರ್ಣಿ, ವಿಜಯಕುಮಾರ, ಸೇರಿದಂತೆ ಅನೇಕರು ಇದ್ದರು.

### ಯಾದಗಿರಿ ಜಿಲ್ಲೆ ಇಬ್ರಾಹಿಂಪುರ ಗ್ರಾಮದಲ್ಲಿ ನಡೆಯಲಿರುವ ಜಾತ್ರಾ ಮಹೋತ್ಸವ

## ಸಾಮೂವಿಕ ವಿವಾಹದಲ್ಲಿ ಚಿತ್ರನಟಿ ಪ್ರೇಮ ಪಾಲ್ಗೊಳ್ಳಲಿದ್ದಾರೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ ತಾಲೂಕಿನ ಇಬ್ರಾಂಪುರ್ ಗ್ರಾಮದಲ್ಲಿ ನಡೆಯಲಿರುವ 26.1.2025 ರಂದು ಇಬ್ರಾಹಿಂಪುರ್ ಶ್ರೀ ಸಾಯಿಬಾಬಾ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ಸಾಮೂಹಿಕದಲ್ಲಿ ಚಿತ್ರನಟಿ ಪ್ರೇಮ ರವರು ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀ ಸಾಯಿಬಾಬಾ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಮಹಾರಾಜ್ ದಿಗ್ಗಿ ಅವರು ಮಲ್ಲಮ್ಮ ನುಡಿ ಪತ್ರಿಕೆಗೆ ಮಾಹಿತಿ ತಿಳಿಸಿದ್ದಾರೆ.

## ಗ್ರಂಥಾಲಯ ವಿಜ್ಞಾನ ತರಬೇತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.21-ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಬೆಂಗಳೂರು, ಮಂಗಳೂರು, ಧಾರವಾಡ ಮತ್ತು ಕಲಬುರಗಿ ಕೇಂದ್ರಗಳಲ್ಲಿ ಆರು ತಿಂಗಳ ಅವಧಿಯ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲಾ ಪ್ರವೇಶಾತಿಗೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜ.31 ರವರೆಗೆ ವಿಸ್ತರಿಸಲಾಗಿದೆ ಎಂದು ಬಳ್ಳಾರಿ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತೀಯ ಸಂಸ್ಕೃತಿ ಉತ್ಸವ ಪ್ರಚಾರ: ಬಸವ ರಥಕ್ಕೆ ಚಾಲನೆ

ಮಲ್ಲಮ ನುಡಿ ವಾರ್ತೆ ಬೀದರ. ಜ. 21: ಸೇಡಂನಲ್ಲಿ ಜ.29 ರಿಂದ ಫೆ. 6 ರ ವರೆಗೆ ನಡೆಯಲಿರುವ ಭಾರತೀಯ ಸಂಸ್ಕೃತಿ ಉತ್ಸವದ ಪ್ರಚಾರಾರ್ಥ ಬಸವ ರಥ ಸಂಚಾರಕ್ಕೆ ಜಿಲ್ಲಾ ಕೇಂದ್ರದಲ್ಲಿ ಮಂಗಳವಾರ ವಿಧ್ಯುಕ್ತ ಚಾಲನೆ ದೊರೆಯಿತು.

ಗಣೇಶ ಮೈದಾನದಲ್ಲಿ ಜಿಲ್ಲೆಯ ಮಠಾಧೀಶರು ಪೂಜೆ ಸಲ್ಲಿಸಿ, ಹಸಿರು ನಿಶಾನೆ ತೋರಿಸಿ, ರಥಕ್ಕೆ ಚಾಲನೆ ನೀಡಿದರು.

ಬಸವ ರಥ ಜಿಲ್ಲೆಯ ತಾಲ್ಲೂಕು, ಹೋಬಳಿ, ಗ್ರಾಮಗಳಲ್ಲಿ ಸಂಚರಿಸಿ ಸಾರ್ವಜನಿಕರನ್ನು ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ವಿಕಾಸ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾದ ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಆಹ್ವಾನಿಸಲಿದೆ. ಜ. 27ಕ್ಕೆ ಸೇಡಂಗೆ ತಲುಪಿ ಸಮಾರೋಪಗೊಳ್ಳಲಿದೆ ಎಂದು ವಿಕಾಸ ಅಕಾಡೆಮಿ ಜಿಲ್ಲಾ ಸಂಚಾಲಕ ರೇವಣಸಿದ್ದಪ್ಪ ಜಲಾದೆ ತಿಳಿಸಿದರು.

ಭಾರತೀಯ ಸಂಸ್ಕೃತಿ ಉತ್ಸವ ಕಲ್ಯಾಣ ಕರ್ನಾಟಕದ ಸ್ವಾಭಿಮಾನದ ಉತ್ಸವವಾಗಿದೆ. ಪ್ರತಿಯೊಬ್ಬರೂ ಭಾಗವಹಿಸಲೇಬೇಕಾದ ಉತ್ಸವವಾಗಿದೆ ಎಂದು ಹೇಳಿದರು.

10 ದಿನಗಳ ಉತ್ಸವದಲ್ಲಿ 30 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ವಿವಿಧ ವಿಷಯಗಳ ಕುರಿತು ರಾಷ್ಟ್ರ, ರಾಜ್ಯದ ಸಂತರು, ಚಿಂತಕರು, ಶಿಕ್ಷಣ ತಜ್ಞರು ಉಪನ್ಯಾಸ ಮಂಡಿಸಲಿದ್ದಾರೆ ಎಂದು ತಿಳಿಸಿದರು.



ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಜ್ಯೋತಿರ್ಮಯಾನಂದ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿ ಉತ್ಸವ ಸ್ವಾಮಿ ವಿವೇಕಾನಂದರ ಕನಸಿಗೆ ಇಂಬು ಕೊಡಲಿದೆ. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಪ್ರೇರಣೆ ನೀಡಲಿದೆ ಎಂದು ಹೇಳಿದರು.

ತಡೋಳಾದ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಬಸವರಾಜ ಪಾಟೀಲ ಸೇಡಂ ಅವರ ನೇತೃತ್ವದಲ್ಲಿ ಶಿಕ್ಷಣ, ಕೃಷಿ, ಗ್ರಾಮಾಭಿವೃದ್ಧಿ, ಮಹಿಳಾ ಸಬಲೀಕರಣ ಸೇರಿದಂತೆ ಈ ಭಾಗದಲ್ಲಿ ವಿವಿಧ ಸಾಮಾಜಿಕ ಕಾರ್ಯಗಳು ನಡೆದಿವೆ. ಉತ್ಸವ ಇದರ ಭಾಗವೇ ಆಗಿದೆ. ಉತ್ಸವ ಜ್ಞಾನದ ಕಣಜವಾಗಿದ್ದು, ಯುವಕರು, ಮಕ್ಕಳು ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಅಣದೂರಿನ ಭಂತೆ ಜ್ಞಾನಸಾಗರ್, ವಿಕಾಸ ಅಕಾಡೆಮಿಯ ಜಿಲ್ಲಾ ಅಧ್ಯಕ್ಷ, ನಿವೃತ್ತ ಕರ್ನಲ್ ಶರಣಪ್ಪ ಸಿಕೇನಪುರ ಮಾತನಾಡಿದರು. ಭಾರತೀಯ ಸಂಸ್ಕೃತಿ ಉತ್ಸವದ ಬೀದರ್ ಜಿಲ್ಲೆಯ ವಿಶೇಷ ಕರಪತ್ರವನ್ನು ಬಿಡುಗಡೆ ಮಾಡಲಾಯಿತು.

ಬೀದರ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಜಿ. ಶೆಟಕಾರ್, ಕೆ.ಆರ್.ಇ. ಟ್ರಸ್ಟ್ ಅಧ್ಯಕ್ಷ ಡಾ. ಬಸವರಾಜ ಪಾಟೀಲ ಅಷ್ಟೂರ, ಮುಖಂಡ ಬಿ.ಎಸ್. ಕುದರೆ, ಗುರುದ್ವಾರದ ಜಗಜೀ???ಸಿಂಗ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ, ಬಿ.ಜಿ. ಮೂಲಿಮನಿ ಫೌಂಡೇಷನ್ ಅಧ್ಯಕ್ಷ ಶಿವಲಿಂಗಪ್ಪ ಜಲಾದೆ, ಬಸವ ಕೇಂದ್ರದ ಜಿಲ್ಲಾ ಘಟಕದ ಅಧ್ಯಕ್ಷ ಶರಣಪ್ಪ ಮಿಠಾರೆ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಪ್ರಮುಖರಾದ ಶಿವಶಂಕರ ಟೋಕರೆ, ಸಂದೀಪ್ ಶೆಟಕಾರ್, ಸಂತೋಷಕುಮಾರ ಮಂಗಳೂರೆ, ಗಣಪತಿ ಸೋಲಪುರೆ, ಆದೀಶ್ ವಾಲಿ ಮತ್ತಿತರರು ಇದ್ದರು.

ಕಲ್ಯಾಣ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘದ ಜಿಲ್ಲಾ ಅಧ್ಯಕ್ಷ ರಾಜೇಂದ್ರ ಮಣಗೇರಿ ಸ್ವಾಗತಿಸಿದರು.

ಬಸವರಾಜ ಅಷ್ಟಗಿ ನಿರೂಪಿಸಿದರು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಇದಕ್ಕೂ ರೇವಣಸಿದ್ದಪ್ಪ ಜಲಾದೆ, ರಾಜೇಂದ್ರ ಮಣಗೀರೆ ಹಾಗೂ ಗುರುನಾಥ ರಾಜಗೀರಾ ಅವರ ನೇತೃತ್ವದ ನೂರಾರು ವಿದ್ಯಾರ್ಥಿಗಳ ತಂಡಗಳು ಶಿವನಗರ, ಜನವಾಡ ರಸ್ತೆ ಹಾಗೂ ರಾಣಿ ಕಿತ್ತೂರು ಚೆನ್ನಮ್ಮ ವೃತ್ತದಿಂದ ಅಂಬೇಡ್ಕರ್ ವೃತ್ತಕ್ಕೆ ಬಂದು ಸೇರಿದವು. ಅಲ್ಲಿಂದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ರಥದೊಂದಿಗೆ ಗಣೇಶ ಮೈದಾನಕ್ಕೆ ತೆರಳಿದರು.

## ನಡೆದಾಡುವ ದೇವರು ಪೂಜ್ಯ ಶಿವಕುಮಾರ ಮಹಾಸ್ವಾಮಿಗಳು :ವೀರಭದ್ರಪ್ಪ ಉಪ್ಪಿನ



ಮಲ್ಲಮ ನುಡಿ ವಾರ್ತೆ ಬೀದರ. ಜ. 21 : ಹೈದ್ರಾಬಾದ ಕರ್ನಾಟಕ ನಾಗ ರಿಕರ ವೇದಿಕೆ, ಜೈಮಾತಾ ಭವಾನಿ ಟ್ರಸ್ಟ್ ಹಾಗೂ ನ್ಯೂ ಮದರ ತೆರೇಸಾ ನಗರ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಬೀದರ್ ಇವುಗಳ ಸಂಯುಕ್ತ ಆಶ್ರಯದಲ್ಲಿ ನಗರದ ಹೆಣ್ಣು ಮಗು ವೃತ್ತದ ಸಮೀಪವಿರುವ ಕಲ್ಯಾಣ ಕರ್ನಾಟಕ ಮಿತ್ರ ಮಂಡಳಿಯ ಕಚೇರಿ ಆವರಣ ದಲ್ಲಿ, ಲಿಂಗೈಕ್ಯ ಸಿದ್ದಗಂಗಾ ಶ್ರೀ ಗಳ 6 ನೆಯ ಪುಣ್ಯಸ್ಮರಣೆ ಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾ ಟಿಸಿದ ಪಶು ವೈದ್ಯಕೀಯ ವಿ ವಿ ಯ ನಿವೃತ್ತ ಅಧಿಕಾರಿ ವೀರ ಭದ್ರಪ್ಪ ಉಪ್ಪಿನ ರವರು ಮಾತನಾಡಿ, ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ವೀರಪುರ ನಲ್ಲಿ ದಿನಾಂಕ 1.4.1908 ರಂದು ಜನಿಸಿದ್ದ ಶ್ರೀಗಳು, 111 ವರ್ಷ ಸುದೀರ್ಘ ಜೀವನ ನಡೆಸಿ, ನಡೆದಾಡುವ ದೇವರು ಎಂಬ ಖ್ಯಾತಿ ಪಡೆದಿದ್ದ, ತ್ರಿವಿಧ ದಾಸೋಹಿ, ತುಮಕೂರು ಸಿದ್ದಗಂಗಾ ಮಠದ ಸಂಸ್ಥಾಪ ಕರಾದ ದಿವಂಗತ ಪೂಜ್ಯ ಶಿವ ಕುಮಾರ ಮಹಾಸ್ವಾಮಿಯವ ರು ಶತಮಾನಗಳಿಗೊಮ್ಮೆ ಭೂಮಿಗೆ ಅವತರಿಸಿ ಬರುವ ದೇವರುಗಳ ಸಾಲಿನಲ್ಲಿ ಅಗ್ರ ಗಣ್ಯರಾಗಿದ್ದರು ಎಂದು ಅಭಿಪ್ರಾಯ ಪಟ್ಟರು.

ಪ್ರಗತಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಅರ ವಿಂದ ಕುಲಕರ್ಣಿಯವರು ಮಾತನಾಡಿ, ಲಕ್ಷ್ಯಾವಧಿ ಬಡ ಮಕ್ಕಳಿಗೆ ಅನ್ನ, ಆಶ್ರಯ ವಿದ್ಯಾದಾನವನ್ನು ನೀಡಿದ ಶ್ರೀಗಳ ಸೇವೆಯು ಅದ್ಭುತ ವಾದದ್ದು ಎಂದು ತಿಳಿಸಿದರು. ಶ್ರೀಗಳ ಕುರಿತ ಸ್ವ–ರಚಿತ ಕವನವನ್ನು ವಾಚನ ಮಾಡಿದರು. ನ್ಯೂ ಮದರ ತೆರೇಸಾ ಸಂಸ್ಥೆಯ ಅಧ್ಯಕ್ಷರಾದ ಸಂಜೀವ ಕುಮಾರ ಸ್ವಾಮಿಯ ವರು ಮಾತನಾಡಿ, ದಿವಂಗತ ಶಿವಕುಮಾರ ಸ್ವಾಮಿಯಂತಹ ಮಹಾತ್ಮರು ಎಲ್ಲ ಸಮುದಾ ಯಗಳಲ್ಲಿ ಹುಟ್ಟಿ ಬಂದ–ರೆ ಸಮಾಜದಲ್ಲಿ ಅಶಾಂತಿ ಎನ್ನು ವುದು ಇರುವುದಿಲ್ಲವೆಂದು ಅಭಿಪ್ರಾಯ ಪಟ್ಟರು. ಸಸಿಗೆ ನೀರೆರೆದು, ಪೂಜ್ಯರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿ ತು. ಅನಂತ ಕುಲಕರ್ಣಿಯವರು ಸ್ವಾಗತಿಸಿದರು. ಮಾರುತಿ ಬಿರಾದಾರ್ ರವರು ಕೊನೆಯಲ್ಲಿ ವಂದಿಸಿದರು. ಏನ್ ಎಲ್ ಪಾಟೀಲ, ಸಿದ್ರಾಮ ಹೂಗಾರ, ಇಲೆಶ್ ಕುಮಾರ, ನಂದಕುಮಾರ್, ರಾಜಕುಮಾರ ಬಿರಾದಾರ ಹಾಗೂ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

## ಫೆ.1ರಂದು ಮಾದಿಗ ಸಮಾಜದ ಒಮ್ಮನಸಿನ ಜಾಗೃತಿ ಸಮಾವೇಶ: ಸ್ವಾಮಿದಾಸ ಕೆಂಪೆನೋರ್



ಮಲ್ಲಮ ನುಡಿ ವಾರ್ತೆ ಬೀದರ. ಜ. 21: ಫೆಬ್ರವರಿ 1ರಂದು ನೌಬಾದ್‌ನಲ;ಲಿರುವ ಡಾ.ಬಾಬು ಜಗಜೀವನರಾಮ ಸಮುದಾಯ ಭವನದಲ್ಲಿ ಕಾಯಕಯೋಗಿ, ಆದ್ಯ ವಚನಕಾರ, ಶಿವಶರನ ಮಾದಾರ ಚನ್ನಯ್ಯ ಅವರ 974 ನೇ ಜಯಂತ್ಯೋತ್ಸವ ಹಾಗೂ ಅನ್ನದಾಸೋಹ ಮತ್ತು ನೂತನ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮ ನಿಮಿತ್ಯ ಮಾದಿಗ ಸಮಾಜದ ಒಮ್ಮನಸ್ಸಿನ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮಾದಿಗ ವೆಲಪೆರ್ ಅಸೋಶಿಯಶನ್ ಸಂಸ್ಥಾಪಕ ಅಧ್ಯಕ್ಷರಾದ ಸ್ವಾಮಿದಾಸ ಕೆಂಪೇನೋರ್ ತಿಳಿಸಿದರು.

ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಅಂದು ಬೆಳಿಗ್ಗೆ 11.30 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ಕರ್ನಾಟಕ ಮಾದಿಗವೆಲಪೆರ್ ಸೋಶಿಯಶನ್ ಹಾಗೂ ಕಾಯಕಯೋಗಿ ಶಿವಶರಣ ಮಾದಾರ ಚನ್ನಯ್ಯ ಜಯಂತ್ಯೋತ್ಸವ ಸಮಿತಿಗಳ ಸಂಯುಕ್ತಾಶ್ರಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅನ್ನದಾಸೋಹ ಜರುಗಲಿದೆ. ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಜಿಗಳು ಸಾನಿಧ್ಯ ವಹಿಸಲಿರುವ ಈ ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ವಾದಿರಾಜ ಆಗಮಿಸುತ್ತಿರುವರು. ಇದೇ ವೇಳೆ ಅಲ್ಲಿರುವ ಮಾದಾರ ಚನ್ನಯ್ಯ ಮೂರ್ತಿಗೆ ಪೂಜೆ ಹಾಗೂ ಮಾಲಾರ್ಪಣೆ ಕಾರ್ಯಕ್ರಮ ಜರುಗುವುದು. ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹಿಮ್ ಖಾನ್, ಹಾಲಿ ಸಂಸದ ಸಾಗರ ಖಂಡ್ರೆ, ಮಾಜಿ ಕೇಂದ್ರ ಮಂತ್ರಿ ಭಗವಂತ ಖೂಬಾ, ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ, ಎಲ್ಲ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು, ನಮ್ಮ ಸಮಾಜದ ಧುರಿಣರು, ರಾಜಕೀಯ ಮುಖಂಡರು, ಸಾಹಿತಿಗಳು, ಚಿಂತನಕಾರರು ಸೇರಿದಂತೆ ಸಾವಿರಕ್ಕೂ ಅಧಿಕ ಜನರು ಸಮಾರಂಭದಲ್ಲಿ ಪಾಲ್ಗೊಳ್ಳುವರು. ಎಂದು ತಿಳಿಸಿದ ಅವರು, ಈ ಸುಂದರ ಕಾರ್ಯಕ್ರಮಕ್ಕೆ ಇನ್ನು ಹೆಚ್ಚಿನ ಜನರು ಭಾಗವಹಿಸಬೇಕೆಂದು ಕರೆ ಕೊಟ್ಟರು.

ಚನ್ನಯ್ಯನ ಜೋಳದ ಅಂಬಲಿ ತಿಂದು ಚೋಳ ರಾಜ ಆರೋಗ್ಯವಂತನಾದ

12ನೇ ಶತಮಾನದ ಅದ್ಯ ವಚನಕಾರರಲ್ಲಿ ಮೊದಲ ಸಾಲಿನಲ್ಲಿ ನಿಲ್ಲುವವರು ಮಾದಾರ ಚನ್ನಯ್ಯನವರು. ಚೋಳ ರಾಜ ಮಾದಾರ ಚನ್ನಯ್ಯನ ಅಂಬಲಿ ತಿಂದು ತನ್ನ ಆರೋಗ್ಯ ಸುಧಾರಿಸಿಕೊಂಡದಲ್ಲದೇ ತನ್ನ ಅಹಂಕಾರ ಕಳೆದುಕೊಂಡಿರುವ ಬಗ್ಗೆ ಪ್ರತೀತಿ ಇದೆ. ಅದಕ್ಕೆ ಬಸವಣ್ಣನವರು ಮಾದಾರ ಚನ್ನಯ್ಯನವರಿಗೆ ಅಪ್ಪನು ನಮ್ಮ ಮಾದಾರ ಚನ್ನಯ್ಯ ಎಂದು ಕರೆದು ಇಡೀ ಶರಣರ ಪಾಲಿಗೆ ಚನ್ನಯ್ಯ ಅಪ್ಪ ಎಂದು ಸಂಭೋದಿಸಿದರು. ಹಾಗಾಗಿ ಮಾದಾರ ಚನ್ನಯ್ಯನವರು ಶ್ರೇಷ್ಠ ಶರಣರು ಎಂದು ಬಣ್ಣಿಸಿದರು. ಸಮಾಜದ ಮುಕಮಡರಾದ ದಯಾನಂದ ವಕೀಲರು, ದಲಿತ ಮುಖಂಡರಾದ ಪ್ರಕಾಶ ಹಳ್ಳಿಖೇಡ, ನೀಲಕಂಠ ಭೇಂಡೆ, ಕಮಲಹಸನ್ ಬಾವಿದೊಡ್ಡಿ, ಜೇಮ್ಸ್ ಇಸ್ಲಾಂಪುರ, ಶಿವರಾಜ ನೆಲವಾಳಕರ್, ಸೀಮನ್, ಮೋಹನ್, ಸಿದ್ಧಾರ್ಥ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

ವಿಜಯಪುರದಲ್ಲಾದ ಘಟನೆಗೆ ಖಂಡನೆ

ಮೊನ್ನೆಯಷ್ಟೆ ವಿಜಯಪುರದಲ್ಲಿ ಇಟ್ಟಿಗೆ ವ್ಯಾಪಾರಿ ಖೇಮ ರಾಠೋಡ ಹಾಗೂ ಇತರೆ ನಾಲ್ಕು ಜನ ಸೇರಿಕೊಂಡು ನಮ್ಮ ಸಮಾಜದ ಕೂಲಿಕಾರ್ಮಿಕ ಸದಾಶಿವ ಮಾದರ ಹಾಗೂ ಇತರೆ ಇಬ್ಬರು ಕಾರ್ಮಿಕರಿಗೆ ಕೈ ಕಾಲು ಕಟ್ಟಿ ಥಳಿಸಿ ಚಿತ್ರಹಿಂಸೆ ನೀಡಿದನ್ನು ಉಗ್ರವಾಗಿ ಖಂಡಿಸುತ್ತೇವೆ ಎಂದು ಕೆಂಪೆನೋರ್ ಇದೇ ವೇಳೆ ತಿಳಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ಮನೆಯಿಂದ ಹೊರಬರಲು ಹಾಗೂ ಒಬ್ಬಂಟಿಗರಾಗಿ ತಿರುಗಾಡಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಕಾನೂನು ಸುವ್ಯವಸ್ಥೆ ಸುಧಾರಿಸಿಕೊಳ್ಳುವಂತೆ ಕರೆ ನೀಡಿದರು.

## ಬೀದರ್ ಪತ್ರಕರ್ತರಿಂದ ಸೌದಿ ಸನ್ಮಾನ



ಬೀದರ. ಜ. 21: ಜಿಲ್ಲೆಯ ಹಿರಿಯ ಪತ್ರಕರ್ತರು ಹಾಗೂ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾದ ಅಪ್ಪಾರಾವ ಸೌದಿ ಅವರಿಗೆ ಭಾನುವಾರ ಸಂಜೆ ತುಮಕೂರಿನಲ್ಲಿ 39ನೇ ಪತ್ರಕರ್ತರ ರಾಜ್ಯ ಸಮ್ಮೇಳನದಲ್ಲಿ ಖಾದ್ರಿ ಶಾಮಣ್ಣ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿದ ಬಳಿಕ ಬೀದರ್ ಜಿಲ್ಲಾ ನಿಯೋಗದ ವತಿಯಿಂದ ಅಪ್ಪಾರಾವ್ ಸೌದಿ ಅವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಶರದ್ ಘಂಟೆ, ಸದಸ್ಯರಾದ ಪ್ರದೀಪ್ ಬಿರಾದಾರ್ ಶಿವಕಾಂತ ಸ್ವಾಮಿ ಇದ್ದರು.

## ಸೋಯಾಬೀನ್ ಖರೀದಿ ಕೇಂದ್ರ ಪುನರಾರಂಭಿಸಿ

ಮಲ್ಲಮ ನುಡಿ ವಾರ್ತೆ ಬೀದರ. ಜ. 21: ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸೋಯಾಬೀನ್ ಖರೀದಿ ಕೇಂದ್ರಗಳನ್ನು ಪುನಃ ರಾರಂಭಿಸಬೇಕು ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪ್ರಭು ಮೂಲಗೆ ಆಗ್ರಹಿಸಿದ್ದಾರೆ. ಈ ಕುರಿತು ಅವರು ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.



ಜಿಲ್ಲೆಯಲ್ಲಿ ಜನವರಿ 2 ರಿಂದ ಸೋಯಾಬೀನ್ ಖರೀದಿ ಕೇಂದ್ರ ಬಂದ್ ಮಾಡಿದ್ದರಿಂದ ನೋಂದಣಿ ಮಾಡಿಸಿರುವ ಸಾವಿರಾರು ರೈತರು ಯೋಜನೆಯ ಲಾಭದಿಂದ ವಂಚಿತರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸಾಕಷ್ಟು ರೈತರು ತೊಗರಿ ಹಾಗೂ ಕಡಲೆ ಕಾಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದು, ಯೋಜನೆಯಡಿ ತೊಗರಿ ಹಾಗೂ ಕಡಲೆ ಖರೀದಿ ಕೇಂದ್ರಗಳನ್ನೂ ಆರಂಭಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

## ಎನ್‌ಎಸ್‌ಎಸ್ ಶಿಬಿರದಿಂದ ಸಮರ್ಪಣಾ ಭಾವ :ಶಿವಶರಣಪ್ಪ ಪಾಟೀಲ




ಮಲ್ಲಮ ನುಡಿ ವಾರ್ತೆ ಬೀದರ. ಜ. 21: ಎನ್‌ಎಸ್‌ಎಸ್ ಶಿಬಿರದಿಂದ ಸಾಮಾಜಿಕ ಜವಾಬ್ದಾರಿ, ಸೇವಾ ಮನೋಭಾವನೆ ಸಹಕಾರ, ಸಹನೆ, ರಾಷ್ಟ್ರದ ಬಗ್ಗೆ ಸಮರ್ಪಣಾ ಭಾವನೆ ಬೆಳವಣಿಗೆಯಾಗುತ್ತದೆ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಶಿವಶರಣಪ್ಪಾ ಪಾಟೀಲ್ ತಿಳಿಸಿದರು. ಶಾಂತಿಕಿರಣ ಚಾರಿಟೇಬಲ್ ಟ್ರಸ್ಟ್ (ರಿ) ಅಡಿಯಲ್ಲಿ ಬರುವ ಶ್ರೀ ಸ್ವಾಮಿ ನರೇಂದ್ರ ಪದವಿ ಪೂರ್ವ ಕಾಲೇಜು ಬೀದರ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.

ಸರ್ವಜ್ಞ ಶಾಲೆಯ ಅಧ್ಯಕ್ಷರಾದ ಬಸವರಾಜ ಬಶೆಟ್ಟಿ ಮಾತನಾಡಿ ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶಗಳನ್ನು ಹೇಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು? ಸಹಜೀವನ, ಸಹಬಾಳ್ವೆಯ ಮಹತ್ವ ಅರಿತು ಮಕ್ಕಳು ಹೇಗೆ ಬದುಕಬೇಕೆಂದು ವಿವರವಾಗಿ ತಿಳಿಸಿದರು. ಶ್ರೀ ಶಾಂತಿಕಿರಣ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ಡಾ॥ ಚಂದ್ರಕಾಂತ ಪಾಟೀಲ್ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಮನೆಯಿಂದಲೇ ಸ್ವಚ್ಛತೆಯನ್ನು ಆರಂಭಿಸಬೇಕು. ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ಹೊರ ಹೊಮ್ಮಲು ರಾಷ್ಟ್ರೀಯ ಸೇವಾ ಯೋಜನೆ ಸಹಾಯಕವಾಗುತ್ತದೆ ಎಂದು ಹೇಳೀದರು.

ಇದೇ ವೇಳೆ ಶ್ರೀಮತಿ ಕಲ್ಪನಾ ಪಿ. ಮಠಪತಿ ನಿರ್ದೇಶಕರು ಶ್ರೀ ಶಾಂತಿಕಿರಣ ಚಾರಿಟೇಬಲ್ ಟ್ರಸ್ಟ್ ಬೀದರ, ಹಾಗೂ ಕು. ಮಂಗಲಾ ಎನ್.ಎಮ್. ಪ್ರಾಚಾರ್ಯರು, ಶ್ರೀ ಸ್ವಾಮಿ ನರೇಂದ್ರ ಪದವಿ ಪೂರ್ವಕಾಲೇಜು ಬೀದರ, ಮತ್ತು ಸುಭಾಷ ಎಸ್, ಎಮ್, ರಾಷ್ಟ್ರೀಯ ಸೇವಾ ಯೋಜನಾ ಅಧಿಕಾರಿಗಳು ಸೇರಿದಂತೆ ಭೋದಕ ಮತ್ತು ಭೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿ ವೃಂದದವರು ಉಪಸಿತ್ಥರಿದರು.

## ನೇತ್ರ ಸಹಾಯಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ರಾಯಚೂರು ಜ.21: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮದಡಿ ಹಾಗೂ ಆಯುಷ್ ವಿಭಾಗದಡಿಯಲ್ಲಿ 2024–25ನೇ ಸಾಲಿಗೆ ಮಂಜೂರಾಗಿ ಖಾಲಿ ಇರುವ ಹುದ್ದೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

# ಐದು ಕೋ.ರೂ ವೆಚ್ಚದಲ್ಲಿ ನಗರಸಭೆ ನೂತನ ಕಟ್ಟಡ ಉದ್ಘಾಟನೆ ಪರವಾನಿಗೆ ಇಲ್ಲದ ಗೃಹ - ವಾಣಿಜ್ಯ ಕಟ್ಟಡಗಳಿಗೆ ಎ ಹಾಗೂ ಬಿ ಖಾತಾ ನೀಡಲು ಶೀಘ್ರದಲ್ಲಿ ಆದೇಶ ಪೌರಾಡಳಿತ ಸಚಿವ ರಹೀಂ ಖಾನ್






ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಜ:21–ಸಾರ್ವಜನಿಕರ ಸಮಸ್ಯೆಗಳಪರಿಹಾರಮತ್ತುನಗರ ಸ್ಥಳೀಯಸಂಸ್ಥೆಗಳವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಣಾ ಪ್ರಮಾಣ ಹೆಚ್ಚಿಸುವ ಉದ್ದೇಶದೊಂದಿಗೆ ಪರವಾನಿಗೆ ಪಡೆಯದೆ ಇರುವ ಗೃಹಹಾಗೂವಾಣಿಜ್ಯಕಟ್ಟಡಗಳಿಗೆ ಹೆಚ್ಚುವರಿ ಶುಲ್ಕ ವಿಧಿಸಿ ಎ ಮತ್ತು ಬಿ ಖಾತಾ ನೀಡುವ ಬಗ್ಗೆ ಶೀಘ್ರವೇ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಪೌರಾಡಳಿತ ಹಾಗೂ ಹಜ್ ಖಾತೆ ಸಚಿವರಾದ ಶ್ರೀ ರಹೀಮ್ ಖಾನ್ ಅವರು ಹೇಳಿದರು.

ನಗರದಲ್ಲಿಂದು ಮಾನ್ಯ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನಯೋಜನೆ4–ರಡಿ ನಗರಸಭೆ ಕಾರ್ಯಾಲಯದ ಐದು ಕೋಟಿ ರೂ. ವೆಚ್ಚದ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯಸರ್ಕಾರಸಾರ್ವಜನಿಕರಿಗೆ ಹಲವುವರ್ಷಗಳಿಂದಅನುಮತಿ ಸಿಗದೆ ಇರುವಂತಹ ಗೃಹ ಹಾಗೂ ವಾಣಿಜ್ಯಕಟ್ಟಡಗಳಿಗೆ ಬಿ.ಬಿ.ಎಂ.ಪಿ ಮಾದರಿಯಲ್ಲಿ ಎ ಮತ್ತು ಬಿ ಖಾತಾ ನೀಡಲು ಉದ್ದೇಶಿಸಿದೆ. ಈಗಾಗಲೇ ಆಕ್ಷೇಪಣೆಗಳನ್ನುಆಹ್ವಾನಿಸಿದೆ.

ಹಲವಾರು ವರ್ಷಗಳಿಂದ ಈ ಸಮಸ್ಯೆ ತಲೆದೋರಿದ್ದು, ಶೀಘ್ರದಲ್ಲಿಯೇ ಈ ಕುರಿತು ಸರ್ಕಾರಿಆದೇಶಹೊರಬೀಳಲಿದೆ. ಇದರಿಂದ ಸಾರ್ವಜನಿಕರಿಗೆ ಸಕಾಲಕ್ಕೆ ಏ– ಮತ್ತು ಬಿ– ಖಾತಾ ದೊರೆಯಲಿದ್ದು, ಇದರಿಂದಅಧಿಕೃತದಾಖಲಾತಿ ಸಾರ್ವಜನಿಕರಿಗೆಸಿಕ್ಕಂತಾಗುತ್ತದೆ. ಅದರಂತೆಇದರಿಂದನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹದಲ್ಲಿಯೂಹೆಚ್ಚಳವಾಗಲಿದೆ ಎಂದು ಸಚಿವರು ಹೇಳಿದರು.

ರಾಜ್ಯದಲ್ಲಿ ನಗರೋತ್ಥಾನ ಹಂತ 4 ರ ಅಡಿಯಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಬರುವ ಮಾರ್ಚ್ ನಂತರ ನಗರೋತ್ಥಾನ5–ರಹಂತದಲ್ಲಿ ಪ್ರತಿ ಕ್ಷೇತ್ರವಾರು ತಲಾ 25 ಕೋಟಿ ರೂಗಳು ಬಿಡುಗಡೆ ಮಾಡುವ ಚಿಂತನೆಯನ್ನು ಸರ್ಕಾರ ಹೊಂದಿದೆ ಎಂದು ಅವರು ಹೇಳಿದರು.

ಯಾದಗಿರಿ ನಗರದಲ್ಲಿ ನಗರ ಸಭೆಗಾಗಿ 5 ಕೋಟಿ ರೂ. ವೆಚ್ಚದ ಸುಸಜ್ಜಿತ ಕಟ್ಟಡ ನಿರ್ಮಿಸಲಾಗಿದೆ.ಈ ಕಟ್ಟಡ ನಿರ್ಮಿಸಿದ ಗುತ್ತಿಗೆದಾರರಿಗೆ 3.50 ಕೋಟಿ ರೂಗಳ ಬಾಕಿ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ಹಿಂದಿನಸರಕಾರದಅವಧಿಯಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿತ್ತು. ಅಂತಹ ಯೋಜನೆಗಳು ಈಗ ಪೂರ್ಣಗೊಂಡಿದ್ದು,ಅವುಗಳಿಗೆ ಈಗಿನ ಸರ್ಕಾರ ಅನುದಾನ ಬರಿಸುತ್ತಿದೆ ಎಂದು ಹೇಳಿದರು.

ಅದರಂತೆ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಮರ್ಪಕ ತೆರಿಗೆ ಸಂಗ್ರಹಣೆ ಆಗಬೇಕು. ಇದರಿಂದ ಮೂಲ ಸೌಕರ್ಯಗಳನ್ನುಒದಗಿಸಲು ಸಹಕಾರಿಯಾಗಲಿದ್ದು, ಕನಿಷ್ಠ ಶೇ. 50ರಷ್ಟು ತೆರಿಗೆ ಸಂಗ್ರಹವಾದಲ್ಲಿ, ಅನುದಾನ ಬಿಡುಗಡೆಯಾಗಲು ಸಹ ಸಹಕಾರಿ ಆಗಲಿದೆ. ಆದರೆ ನಿಗದಿತ ಗುರಿ ಸಾಧಿಸದ ಹಿನ್ನೆಲೆಯಲ್ಲಿ ಜಿಲ್ಲೆಗೆ ಇನ್ನೂ 20 ಕೋಟಿ ರೂ ನಗರೋತ್ಥಾನ ಯೋಜನೆಯಡಿ ಅನುದಾನ ಬರಬೇಕಾಗಿದೆ. ಅದರಂತೆ ಇಲ್ಲಿಯ ಪೌರಕಾರ್ಮಿಕರಿಗೆ ಕ್ವಾರ್ಟರ್ಸ್ ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಣ್ಣಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಮಾತನಾಡಿ ಪ್ರತಿ ಶಾಸಕರಿಗೆ ತಲಾ 10ಕೋ.ರೂ ಸರ್ಕಾರ ಒದಗಿಸಲು ಕ್ರಮ ಕೈಗೊಂಡಿದೆ.ಪಂಚ ಗ್ಯಾರಂಟಿ ಯೋಜನೆಗಳಡಿ 65000 ಕೋ. ರೂಗಳನ್ನು ಒದಗಿಸಿದೆ.ಕಲ್ಯಾಣ ಕರ್ನಾಟಕಕ್ಕೆ 5000 ಕೋಟಿ. ರೂ ಒದಗಿಸಿದೆ. 371(ಜೆ) ಜಾರಿಗೊಳಿಸಿ ಈ ಭಾಗದ ನಿರುದ್ಯೋಗಸಮಸ್ಯೆನಿವಾರಿಸಿದೆ. ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಿದೆ.ರಾಜ್ಯದ ಜನತೆಯ ವಿಶ್ವಾಸ ಸರ್ಕಾರ ಗಳಿಸಿದೆ ಎಂದು ಹೇಳಿದರು.

ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ನಗರದಲ್ಲಿ ರಸ್ತೆಗಳವ್ಯಾಪ್ತಿಯಲ್ಲಿವಿದ್ಯುತ್‌ದೀಪ ಅಳವಡಿಸಿದೆ. ರಸ್ತೆನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ , ಶೀಘ್ರದಲ್ಲಿ ಶುದ್ಧ ಕುಡಿಯುವ ನೀರು ಸರಬರಾಜು ಘಟಕ ಆರಂಭ ಆಗಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಸಕ ವೇಣುಗೋಪಾಲ್ ನಾಯಕ, ನಗರಸಭೆ ಅಧ್ಯಕ್ಷ ಲಲಿತಾ ಮೌಲಾಲಿ ಅನಪುರ, ಉಪಾಧ್ಯಕ್ಷರುಕಯ್ಯುಬೇಗಮ್, ನಗರಾಭಿವೃದ್ಧಿಪ್ರಾಧಿಕಾರದಅಧ್ಯಕ್ಷ ವಿನಾಯಕಮಾಲಿಪಾಟೀಲ್,ಪ್ರಭಾರಿ ಜಿಲ್ಲಾಧಿಕಾರಿಲವೀಶ್ ಒರಡಿಯಾ, ಮುಖ್ಯ ಅಭಿಯಂತರ ರಾಧಾಕೃಷ್ಣನ್, ಪೌರಾಡಳಿತ ಸಚಿವ ರೈ ಆಪ್ತ ಕಾರ್ಯದರ್ಶಿ ಕೆ.ಮುರಲಿಧರ,ಯೋಜನಾ ನಿರ್ದೇಶಕ ಲಕ್ಷ್ಮಿ ಕಾಂತ ರೆಡ್ಡಿ, ಮಹೇಶ್ ಮುದ್ನಾಳ,ಸುರೇಶ್ ಅಂಬಿಗೇರ್,ಕಾರ್ಯ ಪಾಲಿಕೆ ಅಭಿಯಂತರ ವಿಶ್ವನಾಥ್, ಪೌರಾಯುಕ್ತ ಉಮೇಶ್ ಚವಾನ್,ಸ.ಕಾ.ಅ.ರಜನಿಕಾಂತ ಶೃಂಗೇರಿ, ಉಪಸ್ಥಿತರಿದ್ದರು. ಪದವಿ ಕಾಲೇಜು ಪ್ರಾಂಶುಪಾಲ ಸುಭಾಷ್ ಚಂದ್ರ ಕೌಲಗಿ, ಜ್ಯೋತಿ ಲತಾ ಮಾಡಿಬಿಡಿ ಅವರು ಉಪಸ್ಥಿತರಿದ್ದರು.

# ಸಾಮಾಜಿಕ ಅನಿಷ್ಟ ಅಳಿಸಿದ ಅಂಬಿಗರ ಚೌಡಯ್ಯ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ನೇರ ದಿಟ್ಟ ವ್ಯಕ್ತಿತ್ವಹೊಂದಿದ ನಿಜಶರಣ ಅಂಬಿಗರ ಚೌಡಯ್ಯ ತಮ್ಮ ವಚನಗಳಿಂದ12ನೇಶತಮಾನದಲ್ಲಿ ಆಚರಣೆಯಲ್ಲಿದ್ದ ಅನಿಷ್ಟ ಆಚರಣೆಗಳನ್ನುತೊಲಗಿಸಲು ಶ್ರಮಿಸಿದವರು ಎಂದು ವಕೀಲರ ಸಂಘದ ಜಿಲ್ಲಾಧ್ಯಕ್ಷ ಸಿ.ಎಸ್. ಮಾಲಿಪಾಟೀಲ್ ಹೇಳಿದರು.

ನಗರದ ಜಿಲ್ಲಾ ವಕೀಲರ ಸಂಘದ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ನಿಷ್ಠುರತೆಯ ಮಾತುಗಳಿಂದ ಆಗಿನ ಶರಣರು ಅವರಿಗೆ ನಿಜಶರಣ ಎಂದು ಕರೆಯುತ್ತಿದ್ದರು. ಅವರ ತತ್ವಾದರ್ಶಗಳನ್ನು ಹಾಗೂ ವಚನ ಸಾಹಿತ್ಯದ ಸಂದೇಶಗಳನ್ನು ನಮ್ಮ ಜೀವನದಲ್ಲಿಅಳವಡಿಸಿಕೊಂಡಾಗ ಸುಭದ್ರ ಸಮಾಜ ಕಟ್ಟಲು ಸಾಧ್ಯವಾಗುತ್ತದೆ ಎಂದರು.

12ನೇಶತಮಾನದಲ್ಲಿಚೌಡಯ್ಯ ಜಾತ್ಯಾತೀತ, ಧರ್ಮಾತೀತ, ಕಾಯಕ, ದಾಸೋಹ, ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿದವರು. ಇಂತಹ ಶರಣರ ಜಯಂತಿಗಳನ್ನು ಆಚರಣೆ ಮಾಡುವುದರ ಜೊತೆಗೆ ಅವರ ವಚನಗಳಲ್ಲಿ ಸಾರಿದ ಭಾವೈಕತೆಯ ಸಂದೇಶಗಳನ್ನು ನಮ್ಮ ಜೀವನದಲ್ಲಿಅಳವಡಿಸಿಕೊಂಡು ಸೌಹಾರ್ದತೆಯಿಂದಬಾಳೋಣ ಎಂದರು.

ವಕೀಲರಾದ ನಿರಂಜನ್ ಯರಗೋಳ ಮಾತನಾಡಿ, ನಿಜ ಶರಣ ಅಂಬಿಗರ ಚೌಡಯ್ಯ ಅವರ ಮೌಲ್ಯಗಳು ಸಾರ್ವಕಾಲಿಕ. ಅವುಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿನ ಅಂಧ ಶ್ರದ್ಧೆ, ಶಿಕ್ಷಣದಕೊರತೆ,ಮೂಢನಂಬಿಕೆ ನೀಗಿಸಬಹುದು ಎಂದು ಹೇಳಿದರು.

ಮಾನವನು ಲೌಕಿಕಜೀವನಕ್ಕಾಗಿ ನಡೆಸುವ ವೃತ್ತಿಗಳ ಬಗ್ಗೆ ಅಪಾರ ಗೌರವ ಹೊಂದಿದ್ದ ಚೌಡಯ್ಯನವರು, ಕೇವಲ ನದಿ ದಾಟಿಸುವ ವೃತ್ತಿ ಅಷ್ಟೇ ನಡೆಸದೇ ತಮ್ಮ ವಚನಗಳಿಂದ ಜನರನ್ನು ಜಾಗೃತಿಗೊಳಿಸುವ ಮೂಲಕ ನಂಬಿದವರನ್ನು ಭವಸಾಗರದಾಟಿಸುವಶಕ್ತಿಯಾಗಿ ಸಾಧನೆ ಮಾಡಿದವರು. ಶರಣರ ವಚನ ಸಾಹಿತ್ಯ ಪುಸ್ತಕಗಳನ್ನು ಪಾಲಕರು ಮಕ್ಕಳಿಗೆ ಓದಲು ಕೊಡಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ವಕೀಲರಾದ ಶಶಿಧರ್ ಕಮತಗಿ, ರಾಜಕುಮಾರ್ ದೊಡ್ಮನಿ, ಗಿರೀಶ್ ನಿರ್ಮಲ್ಕರ್, ಸುರೇಶ್ ಕಲಾಲ್ ಸೇರಿದಂತೆ ಇತರರು ಇದ್ದರು.



ಚಿಟಗುಪ್ಪ:– ತಾಲೂಕಿನ ವಳಖಿಂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ರಾಮಚಂದ್ರ ಮೇತ್ರೆ ಅವರನ್ನು ಸಂಗಪ್ಪ ನಾರಾಯಣಪುರ ರವರ ಗೆಳೆಯರ ಬಳಗದಿಂದ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ರಾಜಕುಮಾರ ಸ್ವಾಮಿ, ಮಲ್ಲಪ್ಪ ರಾಂಪುರ ಫಾತ್ಮಪುರ್, ರಾಜಕುಮಾರ ಆರ್. ಹಡಪದ ಉಪಸ್ಥಿತರಿದ್ದರು.(ಮಲ್ಲಮ್ಮ ನುಡಿ ಚಿತ್ರ)

# ನಗರದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಕಡುಬಡ ಕೋಲಿ ಸಮಾಜ ಎಸ್.ಟಿ ವರ್ಗಕ್ಕೆ ಸೇರಿಸಲು ಶಕ್ತಿಮೀರಿ ಪ್ರಯತ್ನ ನಿಜಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷ ಶ್ರೀ ಬಾಬುರಾವ್ ಚಿಂಚನಸೂರ






ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜ : 21– ಅತ್ಯಂತ ಕಡು ಬಡವ ಸಮಾಜವಾಗಿರುವ ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಲು ಶಕ್ತಿಮೀರಿ ಪ್ರಯತ್ನಿಸುವುದಾಗಿ ನಿಜಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷರಾದ ಶ್ರೀ ಬಾಬುರಾವ್ ಚಿಂಚನಸೂರ ಅವರು ಹೇಳಿದರು.

ನಗರದವಿದ್ಯಾಮಂಗಲಕಾರ್ಯಾಲಯದಲ್ಲಿ ,ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ , ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ ಹಾಗೂ ನಗರಸಭೆ, ಯಾದಗಿರಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ, ಶ್ರೀ ಅಂಬಿಗರ ಚೌಡಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿದರು .

ಕೋಲಿ ಸಮಾಜ ಅತ್ಯಂತ ಕಡುಬಡವ ಸಮಾಜ ವಾಗಿದ್ದು, ಮಹಿಳೆಯರು ಇನ್ನೂ ಕೂಲಿ ಕೆಲಸಕ್ಕೆ ಹೋಗುವಂತಹ ಪರಿಸ್ಥಿತಿ ಇದೆ. ಅದರಂತೆ ಸರ್ಕಾರಿ ಕೆಳದರ್ಜೆಯ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಅತ್ಯುನ್ನತ ಹುದ್ದೆಯನ್ನು ಅಲಂಕರಿಸಲು, ಉನ್ನತ ವಿದ್ಯಾಭ್ಯಾಸಕ್ಕಾಗಿ ಪರಿಶಿಷ್ಟ

ಪಂಗಡ ಮೀಸಲಾತಿ ಅತ್ಯಂತ ಅವಶ್ಯಕವಾಗಿದೆ. ಅದರಂತೆ ಈ ಸಮಾಜದ ಮಕ್ಕಳು ಉನ್ನತ ಹುದ್ದೆಗಳನ್ನು ಅಲಂಕರಿಸಲು ಈ ಮೀಸಲಾತಿಯ ಅವಶ್ಯಕತೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಪರಿಶಿಷ್ಟ ಪಂಗಡ ವರ್ಗದ ಪಟ್ಟಿಯಲ್ಲಿ ಸೇರ್ಪಡಿಸಲು, ಶಕ್ತಿಮೀರಿ, ಕೊನೆಯುಸಿರಿನವರೆಗೂ ಹೋರಾಡುವುದಾಗಿ ತಿಳಿಸಿದ ಅವರು ಸಮಾಜದ ಒಗ್ಗಟ್ಟು ಮತ್ತು ಐಕ್ಯತೆಯಿಂದ ಮಾತ್ರ ಇದು ಸಾಧ್ಯವಿದೆ ಎಂದು ಹೇಳಿದರು.

ತಾವು ಸಚಿವರಾಗಿದ್ದ ಸಂದರ್ಭದಲ್ಲಿ ಈ ಜನಾಂಗವನ್ನು ಪ್ರವರ್ಗ– 1 ರ ಪಟ್ಟಿಗೆ ಸೇರಿಸಲಾಗಿತ್ತು. ಈ ಜನಾಂಗ ಪ್ರತಿಯೊಂದು ಕ್ಷೇತ್ರದಲ್ಲಿ ಮುಂದೆ ಬರಬೇಕಾದಲ್ಲಿ ಪರಿಶಿಷ್ಟ ಪಂಗಡ ಮೀಸಲಾತಿ ಪಡೆಯೋದು ಅತ್ಯಂತ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಈ ಮೀಸಲಾತಿ ಪಡೆಯಲು ಪ್ರಯತ್ನಿಸುವ ಅಗತ್ಯವಿದೆ ಎಂದು ಹೇಳಿದರು.

ನಿಜಶರಣ ಅಂಬಿಗರ ಚೌಡಯ್ಯ ಜನಾಂಗದವರಾದ ಕೋಲಿ ಸಮಾಜ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮುಂದೆ ಬರಬೇಕಾದಲ್ಲಿ ಈ ಮೀಸಲಾತಿ ಮುಖ್ಯ, ಈ ದಿಸೆಯಲ್ಲಿ ಒಗ್ಗಟ್ಟಾಗಿ ದೊಡ್ಡ ಪ್ರಮಾಣದ ಹೋರಾಟ ನಾವೆಲ್ಲರೂ ಮಾಡೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ, ನರೋಣ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕರು ಡಾ. ಭೀಮರಾಯ ಅರಕೇರಿ ಅವರು ಮಾತನಾಡಿ, ನಿಜಶರಣ ಅಂಬಿಗರ ಚೌಡಯ್ಯ ಅವರು ಸಾಮಾಜಿಕ ತಾರತಮ್ಯ, ಲಿಂಗ ತಾರತಮ್ಯವನ್ನು ಹೋಗಲಾಡಿಸಲು, ಜಾತಿ ಪದ್ಧತಿ, ಅಸ್ಪೃಶ್ಯತೆ ವಿರುದ್ಧ ಕ್ರಾಂತಿಕಾರಿ ವಚನಗಳ ಮೂಲಕ ಸಮಾಜ ಜಾಗೃತಗೊಳಿಸುವ ಕಾರ್ಯ ಮಾಡಿದರು. ಮೂಡನಂಬಿಕೆ, ಡಾಂಭಿಕಭಕ್ತಿ, ಶೋಷಣೆ, ಸಾಮಾಜಿಕ ತಾರತಮ್ಯದ ವಿರುದ್ಧ ಕ್ರಾಂತಿಕಾರಿ ವಚನಗಳನ್ನು ವಿಡಂಬನಾತ್ಮಕ ರೀತಿಯಲ್ಲಿ ಜನರಿಗೆ ತಿಳಿಹೇಳಿ ಸಮ ಸಮಾಜ ಸುಧಾರಣೆಗೆ ಶ್ರಮಿಸಿದರು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಲಿತಾ ಮೌಲಾಲಿ ಅನಪುರ ಅವರು ಕೋಲಿ ಸಮಾಜ ಒಗ್ಗಟ್ಟಿನಿಂದ ಪ.ಪಂಗಡ ಮೀಸಲಾತಿ ಪಡೆಯೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಗೋಸಿ ಮಾತನಾಡಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವಿನಾಯಕ ಮಾಲಿಪಾಟೀಲ್, ಅಪರ್ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಸಮಾಜದ ಮುಖಂಡರಾದ ಮಹೇಶ್ ಮುದ್ನಾಳ, ಉಪಸ್ಥಿತರಿದ್ದರು. ಡಾ ಶ್ರೀನಿವಾಸ್ ಕಾರ್ಯಕ್ರಮ ನಿರ್ವಹಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಸುರಪುರ ತಾಲೂಕ ಘಟಕ ವತಿಯಿಂದ


# ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಪುಣ್ಯ ಸ್ಮರಣೋತ್ಸವ ಹಾಗೂ ದಾಸೋಹದಿನ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರ : ಪದ್ಮಭೂಷಣ ಕರ್ನಾಟಕ ರತ್ನ ಬಸವ ಶ್ರೀ ಪ್ರಶಸ್ತಿ ಪುರಸ್ಕೃತರು ತ್ರಿವಿಧ ದಾಸೋಹಿ ಮಹಾಶಿವಯೋಗಿ ಪರಮಪೂಜ್ಯ ಡಾ!! ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ರವರ ಪುಣ್ಯೋತ್ಸವ ದಾಸೋಹ ದಿನ ಆಚರಣೆ ಮಾಡಿದರು ಈ ಕಾರ್ಯಕ್ರಮದಲ್ಲಿ ಪ್ರಕಾಶ್ ಅಂಗಡಿ ಅವರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಮುಖಂಡರು ಭಾಗಿಯಾಗಿ ಪುಣ್ಯ ಸ್ಮರಣೋತ್ಸವ ಹಾಗೂ ದಾಸೋಹದಿನ ಆಚರಣೆ ಮಾಡಿದರು..

# "ಭೀಮ ಸಂಗಮ ಅಭಿಯಾನ"



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಜ.21: ಭೀಮ ಸಂಗಮ ಅಭಿಯಾನದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮಾಜ ಬಾಂಧವರಿಗೆ ಹಾಗೂ ಜಗನ್ನಾಥ ಮಾದಿಗ ದಂಪತಿ ಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಅವರ ಸ್ವಗೃಹದಲ್ಲಿ ಪಾದ ಪೂಜೆ ಮತ್ತು ಸನ್ಮಾನ ಮಾಡುವುದರ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ವೈ. ಎಂ.ಸತೀಶ್, ನಗರದ ಮಾಜಿ ಶಾಸಕ ಸೋಮಶೇಖರ್ ರೆಡ್ಡಿ, ಸಂಘದ ಪ್ರಮುಖ ಪ್ರಸನ್ನ, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಹನುಮಂತಪ್ಪ, ಕಾರ್ಪೊರೇಟ್ ಗಳಾದ ಹನುಮಂತಪ್ಪ, ಮೋತ್ಕರ್ ಶ್ರೀನಿವಾಸ್ ಹಾಗೂ ಸಮಾಜದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

# ರೈತರಿಗೆ ತರಬೇತಿ: ಹೆಸರು ನೋಂದಣಿಗೆ ಸೂಚನೆ

ಕಲಬುರಗಿ,ಜ.21–ಪ್ರಸಕ್ತ 2024–25ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಯೋಜನೆಯಾದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತುಂತುರು ಮತ್ತು ಹನಿ ನೀರಾವರಿ ಪದ್ಧತಿ ಅಳವಡಿಕೆಯಿಂದ ಆಗುವ ಉಪಯೋಗಗಳು ಮತ್ತು ಅವುಗಳ ನಿರ್ವಹಣೆ ಕುರಿತು ಇದೇ ಜನವರಿ 27 ರಿಂದ 29 ರವರೆಗೆ ಮೂರು ದಿನಗಳ ತರಬೇತಿ ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಆಯೋಜಿಸಲಾಗಿದೆ ಎಂದು ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಮುಖ್ಯಸ್ಥರು ತಿಳಿಸಿದ್ದಾರೆ. ತರಬೇತಿ ಪಡೆಯಲು ಆಸಕ್ತಿವುಳ್ಳ ಎಫ್‌ಐಡಿ (ಈಖಲಿ) ಹೊಂದಿರುವ ರೈತರು ಮತ್ತು ರೈತ ಸಂಪರ್ಕ ಕೇಂದ್ರಗಳಿಂದ ತುಂತುರು ಮತ್ತು ಹನಿ ನೀರಾವರಿ ಘಟಕಗಳನ್ನು ಪಡೆದ ರೈತರು ಕೃಷಿ ಅಧಿಕಾರಿಗಳಾದ ಸುಜಾತಾ.ಆರ್.ರಾಜನಾಳಕರ ಇವರ ಮೊಬೈಲ್ ಸಂಖ್ಯೆ 9448651201 ಹಾಗೂ ಯಾಸ್ಮಿನ್ ಇವರ ಮೊಬೈಲ್ ಸಂಖ್ಯೆ 9901604822 ಗಳಿಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಈ ಹಿಂದೆ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಯೋಜನೆಯಡಿ ತರಬೇತಿ ಪಡೆದ ರೈತರನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

## ನಾಳೆ ವಿವಿಧ ಮಹನೀಯರ ಜಯಂತಿಯ ಪೂರ್ವಭಾವಿ ಸಭೆ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಫೆ.01 ರಂದು ಮಡಿವಾಳ ಮಾಚಿದೇವ ಜಯಂತಿ, ಫೆ.05 ರಂದು ಸವಿತಾ ಮಹರ್ಷಿ ಜಯಂತಿ ಹಾಗೂ ಫೆ.10 ರಂದು ಕಾಯಕ ಶರಣರ ಜಯಂತಿ ಆಚರಣೆ ಕುರಿತು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರ ಅಧ್ಯಕ್ಷತೆಯಲ್ಲಿ ಜ.23 ರಂದು ಬೆಳಿಗ್ಗೆ 11.30 ಗಂಟೆಗೆ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

## ಹೊಲಿಗೆ ತರಬೇತಿಗಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಆರ್‌ಎಪಿ ಯೋಜನೆಯಡಿ ಗ್ರಾಮೀಣ ಭಾಗದ ಮಹಿಳಾ ಅಭ್ಯರ್ಥಿಗಳಿಂದ ಹೊಲಿಗೆ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.26 ಸಾಮಾನ್ಯ ವರ್ಗದ ಮತ್ತು ವಿಶೇಷ ಘಟಕ ಯೋಜನೆಯಡಿ 04 ಸೇರಿ ಒಟ್ಟು 30 ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಡ್ ಗ್ರಾಮೀಣ ತರಬೇತಿ ಸಂಸ್ಥೆಯಿಂದ ಒಂದು ತಿಂಗಳ ಉಚಿತ ವಸತಿಯೊಂದಿಗೆ ಶಿಷ್ಯವೇತನ ರಹಿತ ತರಬೇತಿ ನೀಡಲಾಗುವುದು.ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಮಹಿಳಾ ಅಭ್ಯರ್ಥಿಗಳಿಗೆ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ವೆಬ್‌ಸೈಟ್ ballari.nic.in ವಿಳಾಸಕ್ಕೆ ಭೇಟಿ ನೀಡಬೇಕು. ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನವಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಬಳ್ಳಾರಿ-ಮೊ.9035547140,ಸಂಡೂರು-ಮೊ.9844200579 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಚಿತ ವಿದ್ಯುತ್‌ಚಾಲಿತ ಹೊಲಿಗೆಯಂತ್ರ ವಿತರಣೆ: ಅರ್ಜಿ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ವೃತ್ತಿನಿರತ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳೆಯರಿಗೆ ಸ್ವಯಂಉದ್ಯೋಗ ಕೈಗೊಳ್ಳಲು ಉಚಿತವಾಗಿ 192 ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಿಸಲು ಉದ್ದೇಶಿಸಲಾಗಿದ್ದು, ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.ಅರ್ಜಿಗಳನ್ನು ಆನ್‌ಲೈನ್ ವೆಬ್‌ಸೈಟ್ ಭಚಿಟ-lari.nic.in ಗೆ ಭೇಟಿ ನೀಡಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಫೆಬ್ರವರಿ 16 ಕೊನೆಯ ದಿನವಾಗಿದೆ.
ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಬಳ್ಳಾರಿ-ಮೊ.9035547140,ಸಂಡೂರು-ಮೊ.9844200579 ಗೆ ಸಂಪರ್ಕಿಸಬಹುದು ಎಂದು ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ತಾಯಿ, ಮಗು ಕಾಣೆ: ಪತ್ತೆಗೆ ಮನವಿ




**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಸಂಡೂರು ತಾಲ್ಲೂಕಿನ ಡಿ.ಅಂತಾಪುರ ಗ್ರಾಮದ ಸರಸ್ವತಿ ಎನ್ನುವ 30 ವರ್ಷದ ಮಹಿಳೆ ಮತ್ತು ಸೃಜನ್ ಎನ್ನುವ 04 ವರ್ಷದ ಮಗು 2024 ರ ನ.10 ರಂದು ಕಾಣೆಯಾಗಿರುವ ಕುರಿತು ತೋರಣಗಲ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.
*ಮಹಿಳೆ ಮತ್ತು ಮಗುವಿನ ಚಹರೆ:*ಮಹಿಳೆಯು ಎತ್ತರ 4.8 ಅಡಿ, ದುಂಡು ಮುಖ, ಗೋಧಿ ಮೈಬಣ್ಣ ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಸಿಮೆಂಟ್ ಬಣ್ಣದ ಟಾಪ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ತೊಟ್ಟಿದ್ದು, ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾಳೆ.ಮಗುವು ಗೋಧಿ ಮೈಬಣ್ಣ ಹೊಂದಿದ್ದು, ಕನ್ನಡ ಮಾತನಾಡುತ್ತಾನೆ.
ಮೇಲ್ಕಂಡ ಚಹರೆ ಗುರುತುಗಳುಳ್ಳ ಮಹಿಳೆ ಮತ್ತು ಮಗುವಿನ ಬಗ್ಗೆ ಮಾಹಿತಿ ದೊರೆತಲ್ಲಿ ತೋರಣಗಲ್ಲು ಪೊಲೀಸ್ ಠಾಣೆಯ ಡಿವೈಎಸ್ಪಿ ದೂ.9480803010,ಸಂಡೂರು ವೃತ್ತದ ಸಿಪಿಐ ದೂ.08395-260100, 9480803036 ಅಥವಾ ಬಳ್ಳಾರಿ ಎಸ್‌ಪಿ ಅವರ ಕಚೇರಿ ದೂ.08392-258300,ಬಳ್ಳಾರಿ ಕಂಟ್ರೋಲ್ ರೂಂ ದೂ.08392-279100 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೈನಂದಿನ ಅಹಾರದಲ್ಲಿ ಸಿರಿಧಾನ್ಯ ಬಳಕೆಯಿಂದ ಆರೋಗ್ಯ ವೃದ್ಧಿ:
# ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ



**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:
ಕಲಬೆರೆಕೆ ರಹಿತ ಮತ್ತು ಆರೋಗ್ಯವಂತರಾಗಿರಲು ಸಿರಿಧಾನ್ಯದಿಂದ ತಯಾರಿಸಿದ ಆಹಾರವನ್ನು ನಮ್ಮ ದೈನಂದಿನ ಆಹಾರ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಆರೋಗ್ಯವಂತರಾಗಿಬದುಕಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.ಅಂತರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ ಸಹಯೋಗದೊಂದಿಗೆ ನಗರದ ರೈಲ್ವೆ ನಿಲ್ದಾಣ ರಸ್ತೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಸಿರಿಧಾನ್ಯ ನಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.ಸಿರಿಧಾನ್ಯ ಸೇವನೆ ಆರೋಗ್ಯಕ್ಕೆ ಉತ್ತಮವಾಗಿದೆ. ರಾಸಾಯನಿಕ ಗೊಬ್ಬರ ಇಲ್ಲದೇ ಬೆಳೆಯುವ ಬೆಳೆ ಅಂದರೆ ಅವು ಸಿರಿಧಾನ್ಯಗಳು. ಹೀಗಾಗಿ ಮನೆಗಳಲ್ಲಿ ಹೆಚ್ಚಾಗಿ ಸಿರಿಧಾನ್ಯಗಳನ್ನು ಉಪಯೋಗಿಸಬೇಕು ಎಂದರು. ಜಂಕ್‌ಫುಡ್ ಉಪಯೋಗಿಸುವುದರಿಂದ ಚಿಕ್ಕ ವಯಸ್ಸಿನಲ್ಲಿಯೇ ಆರೋಗ್ಯ ಕೆಡುತ್ತಲಿದೆ. ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳ ಬಳಕೆಯಿಂದಾಗುವ ಮಹತ್ವ ಕುರಿತು ಜಾಗೃತಿ ಹೆಚ್ಚಿದ್ದು, ಸಿರಿಧಾನ್ಯ ಬಳಕೆ-ಯೂ ಕೂಡ ಹೆಚ್ಚಾಗುತ್ತಿದೆ. ಹಾಗಾಗಿ ಸಿರಿಧಾನ್ಯಗಳ ಬಳಕೆಯಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು ಎಂದರು.ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ಮಾತನಾಡಿ, ಸಿರಿಧಾನ್ಯಗಳಿಂದ ವಿವಿಧ ಖಾದ್ಯಗಳನ್ನು ತಯಾರಿಸುವ ಬಗೆಯ ಕುರಿತು ಜಾಗೃತಿ ಮೂಡಿಸಲು ಸಿರಿಧಾನ್ಯ ಪಾಕಸ್ಪರ್ಧೆ, ಸಿರಿಧಾನ್ಯ ಜಾಥಾ ಹಾಗೂ ಇದೇ ಜನವರಿ 23 ರಿಂದ 25 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂತರಾಷ್ಟ್ರೀಯ ವಾಣಿಜ್ಯ ಮೇಳ, ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಆಯೋಜಿಸಲಾಗಿದ್ದು, ನಾವೆಲ್ಲರೂ ಇದರ ಸದುಪಯೋಗ ಪಡೆದುಕೊಳ್ಳೋಣ ಎಂದರು. ಸಿರಿಧಾನ್ಯಗಳಲ್ಲಿ ನಾರು, ಕಬ್ಬಿಣದ ಅಂಶಗಳು ಹಾಗೂ ಕಾರ್ಬೋಹೈಡೇಟ್‌ಗಳು ಹೆಚ್ಚಾಗಿವೆ. ರೋಗನಿರೋಧಕ ಶಕ್ತಿ ಇರುವುದರಿಂದ ಪೌಷ್ಠಿಕತೆಯ ಖಣಜಗಳೇ ಆಗಿವೆ. ಅಕ್ಕಿ, ಗೋಧಿಗಿಂತ ಐದು ಪಟ್ಟು ಪ್ರೋಟಿನ್, ವಿಟಮಿನ್, ನಾರಿನಾಂಶ ಹಾಗೂ ಖನಿಜಗಳನ್ನು ಹೊಂದಿವೆ. ಸಿರಿಧಾನ್ಯಗಳನ್ನು ಉಪಯೋಗಿಸುವುದರಿಂದ ರಕ್ತದೊತ್ತಡ, ಮಧುಮೇಹ ಬರಲ್ಲ ಎಂದು ತಿಳಿಸಿದರು.
ಇದಕ್ಕೂ ಮುನ್ನ ಸಿರಿಧಾನ್ಯ ನಡಿಗೆ ಜಾಥಾಗೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಹಾಗೂ ಮಹಾನಗರ ಪಾಲಿಕೆ ಸದಸ್ಯ ಗಾದೆಪ್ಪ, ರೈತ ಮುಖಂಡರಾದ ಪುರುಷೋತ್ತಮ ಗೌಡ, ಏನಾಥ ರೆಡ್ಡಿ ಸೇರಿದಂತೆ ಕೃಷಿ ಇಲಾಖೆ ಅಧಿಕಾರಿಗಳು ಹಾಗು ಇತರರು ಸೇರಿ ಚಾಲನೆ ನೀಡಲಾಯಿತು.ಜಾಥಾವು ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ಬ್ರೂಸ್‌ಪೇಟೆ ಪೊಲೀಸ್ ಠಾಣೆ ಮುಂಭಾಗ, ಜೈನ್ ಮಾರ್ಕೆಟ್, ಹೆಚ್.ಆರ್. ಗವಿಯಪ್ಪ ವೃತ್ತದಿಂದ ಮರಳಿ ಜಿಲ್ಲಾಧಿಕಾರಿಗಳ ಕಚೇರಿ ಆವರಣಕ್ಕೆ ತಲುಪಿತು.ಜಾಥಾ ನಡಿಗೆ ಉದ್ದಕ್ಕೂ ಸಿರಿಧ್ಯಾನ ಸೇವಿಸಿ ಅನಾರೋಗ್ಯ ದೂರವಿರಿಸಿ, ನವಣೆ ನಮ್ಮ ಆರೋಗ್ಯದ ನಿರ್ವಹಣೆ, ಜೋಳ ಇಲ್ಲದ ಊಟ ಬರೀ ಗೋಳಾಟ, ಸಿರಿಧಾನ್ಯ ಬಳಸು ಬಳ್ಳೆಯ ಜೀವನ ನಡೆಸು, ರಾಗಿ ಬಳಸಿ ಆರೋಗ್ಯ ಉಳಿಸಿ, ಬರಗು ಇದ್ದರೆ ಬರಗಾಲದಲ್ಲೂ ಬದುಕು ಎನ್ನುವ ಫಲಕಗಳನ್ನು ಪ್ರದರ್ಶಿಸಲಾಯಿತು.ನಂತರ ಸವಿಯಲು ಸಿರಿಧಾನ್ಯಗಳಿಂದ ತಯಾರಿಸಿದ ನವಣೆ ಪಾಯಸ, ನವಣೆ ಬಾತ್, ಸಜ್ಜೆಯಿಂದ ಮಾಡಿದ್ದ ಉಪ್ಪಿಟ್ಟು ಹಾಗೂ ನವಣೆಯಿಂದ ಮಾಡಿದ ಅಂಬಲಿ ಟೀ ಮಾಡಲಾಗಿತ್ತು.
ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕೃಷಿ ಉಪನಿರ್ದೇಶಕ ಮಂಜುನಾಥ.ಎಸ್.ಎನ್., ಸಹಾಯಕ ಕೃಷಿ ನಿರ್ದೇಶಕ ದಯಾನಂದ ಸೇರಿದಂತೆ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷರು, ಕೃಷಿ ಅಧಿಕಾರಿಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ, ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಅನಾಮಧೇಯ ಮೃತ ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ನಗರದ ಬಿಮ್ಸ್ ಅಸ್ಪತ್ರೆ ಆವರಣದಲ್ಲಿರುವ ಪೋಲೀಸ್ ಔಟ್‌ಪೋಸ್ಟ್ ಮುಂಭಾಗ ಜ.16 ರಂದು ಅಂದಾಜು 50 ವರ್ಷದ ಅಪರಿಚಿತ ವ್ಯಕ್ತಿಯು ಅಸ್ವಸ್ಥನಾಗಿ ಕಂಡುಬಂದಿದ್ದು, ಬಳಿಕ ಆಸ್ಪತ್ರೆಗೆ ದಾಖಲಿಸಿ ವೈದ್ಯರು ಪರೀಕ್ಷಿಸಿದಾಗ ಮೃತ ಪಟ್ಟಿರುತ್ತಾನೆ ಎಂದು ತಿಳಿಸಿದ್ದು, ಈ ಕುರಿತು ಕೌಲ್‌ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.*ಮೃತನ ಚಹರೆ:*ಎತ್ತರ 5.4 ಇಂಚು, ಕೋಲು ಮುಖ, ಗೋಧಿ ಮೈಬಣ್ಣ ಹೊಂದಿದ್ದು, ತಲೆ ಮೇಲೆ ಕಪ್ಪು ಬಿಳಿ ಕೂದಲು, ಕಪ್ಪು ಬಿಳಿ ಗಡ್ಡ, ಮೃತನ ದೇಹದ ಮೈಮೇಲೆ ಬಿಳಿ ಬಣ್ಣದ ತುಂಬು ತೋಳಿನ ಅಂಗಿ, ಕಂದು ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ.ಮೇಲ್ಕಂಡ ಚಹರೆ ಗುರುತುಗಳುಳ್ಳ ಮೃತನ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392-258100, ಕೌಲ್ ಬಜಾರ್ ಪೊಲೀಸ್ ಠಾಣೆಯ ದೂ.08392-240731, ಪಿ.ಐ ಮೊ.9480803047, ಪಿಎಸ್‌ಐ ಮೊ.9480803084 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.12 ರಂದು ನಿರುಪಯುಕ್ತ ವಾಹನ ಬಹಿರಂಗ ಹರಾಜು


**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಗುಣ ನಿಯಂತ್ರಣ ವಿಭಾಗ ಧಾರವಾಡಕ್ಕೆ ಸೇರಿದ ಸಂಪೂರ್ಣ ನಿರುಪಯುಕ್ತ (ಟಾಟಾ ಸುಮೋ ಜೀಪ್) ವಾಹನವನ್ನು ಫೆ.12 ರಂದು ಮಧ್ಯಾಹ್ನ 01 ಗಂಟೆಗೆ ನಗರದ ಕೋಟೆ ಪ್ರದೇಶದ ಪಿಡಬ್ಲ್ಯೂಡಿ ಕಾಂಪೌಂಡ್‌ನ ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಗುಣ ನಿಯಂತ್ರಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಯಲ್ಲಿ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುತ್ತದೆ ಎಂದು ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.
ಅಸಕ್ತಿಯುಳ್ಳವರು ತುಂಬಿದ ಮೊಹರ್‌ಬಂದ್ ಲಕೋಟೆಯನ್ನು ಫೆ.05 ರಿಂದ ಫೆ.11 ರೊಳಗಾಗಿ ಬಳ್ಳಾರಿ ಕಚೇರಿಗೆ ಸಲ್ಲಿಸಬೇಕು. ಇಎಮ್‌ಡಿ ಮೊತ್ತ ಹಾಗೂ ಹೆಚ್ಚಿನ ಮಾಹಿತಿಗಾಗಿ ನಗರದ ಕೋಟೆ ಪ್ರದೇಶದ ಪಿಡಬ್ಲ್ಯೂಡಿ ಕಾಂಪೌಂಡ್‌ನ ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಗುಣ ನಿಯಂತ್ರಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

## ಅಮೀತಕುಮಾರ್ ರೆಡ್ಡಿ.ಎ ಅವರಿಗೆ ಪಿಹೆಚ್‌ಡಿ ಪದವಿ



**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಗಂಗಾವತಿಯ ಸಂಕಲ್ಪ ಡಿಗ್ರಿ ಕಾಲೇಜಿನ ಪ್ರಾಂಶುಪಾಲರಾದ ಅಮೀತಕುಮಾರ್ ರೆಡ್ಡಿ ಎ ಅವರಿಗೆ ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ಘೋಷಿಸಿದೆ.ಅಮೀತಕುಮಾರ್ ರೆಡ್ಡಿ ಅವರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮೇಘರಾಜ ಬಿ ಅವರ ಮಾರ್ಗದರ್ಶನದಲ್ಲಿ "ವರ್ಚುವಲ್ ಬ್ಯಾಂಕಿಂಗ್ ಪ್ರಾಕ್ಟೀಸ್ ಆಫ್ ಪಬ್ಲಿಕ್ ಆ್ಯಂಡ್ ಪ್ರೈವೇಟ್ ಸೆಕ್ಟರ್ ಬ್ಯಾಂಕ್ಸ್; ಎ ಕೇಸ್ ಸ್ಟಡಿ ಆಫ್ ಬಳ್ಳಾರಿ ಸಿಟಿ" ಎಂಬ ವಿಷಯ ಕುರಿತು ಸಂಶೋಧನೆ ನಡೆಸಿ ಸಿದ್ಧಪಡಿಸಿ ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ಘೋಷಿಸಲಾಗಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

## ಇಂದು ವಿದ್ಯುತ್ ಗ್ರಾಹಕರ ಸಂವಾದ ಮತ್ತು ಕುಂದುಕೊರತೆ ಸಭೆ



**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಜ.21:ಕಂಪ್ಲಿ ಉಪ-ವಿಭಾಗ ಜೆಸ್ಕಾಂ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರಿಗಾಗಿ ವಿದ್ಯುತ್ ಸಂಬಂಧಿತ ದೂರು, ಸಮಸ್ಯೆ ಮತ್ತು ಅರಿವು ಮೂಡಿಸುವ ಸಲುವಾಗಿ ಜ.22 ರಂದು ಕಂಪ್ಲಿ ಜೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಮಧ್ಯಾಹ್ನ 12 ಗಂಟೆಗೆ ವಿದ್ಯುತ್ ಗ್ರಾಹಕರ ಸಂವಾದ ಮತ್ತು ಕುಂದುಕೊರತೆ ಸಭೆ ಏರ್ಪಡಿಸಲಾಗಿದೆ.
ಕಂಪ್ಲಿ ಉಪ-ವಿಭಾಗ ಜೆಸ್ಕಾಂ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಸ್ಯೆ ಇರುವಂತಹ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಭೆಗೆ ಹಾಜರಾಗಬೇಕು ಎಂದು ಕಂಪ್ಲಿ ಉಪ-ವಿಭಾಗ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮುಂದುವರೆದ ಶಾಸಕ ಪ್ರಭು ಚವ್ಹಾಣ ಗ್ರಾಮ ಸಂಚಾರ
# ಸುಮಾರು 2 ಕೋಟಿಯ ಅಭಿವೃದಿ ಕಾಮಗಾರಿಗಳಿಗೆ ಚಾಲನೆ



**ಮಲ್ಲಮ್ಮ ನುಡಿ ವಾರ್ತೆ**
ಬೀದರ:ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ಗ್ರಾಮ ಸಂಚಾರ ಮುಂದುವರೆಸಿದ್ದು, ಜ.20 ರಂದು ಖೇರ್ಡಾ, ಭಂಡಾರಕುಮಟಾ, ಧೋಪರವಾಡಿ, ಹಂದಿಕೇರಾ, ಚಿಮ್ಮೇಗಾಂವ, ಮಾಳೆಗಾಂವ, ಭೊಪಾಳಘಡ್, ಬೆಳಕುಣಿ(ಬಿ), ಭವಾಜಿ ಬಿಜಲಗಾಂವ, ಸಂಗನಾಳ ಸೇರಿದಂತೆ ವಿವಿಧ ಗ್ರಾಮಗಳಿಗೆ ಬೇಟಿ ನೀಡಿ ಸುಮಾರು 2 ಕೋಟಿ ಮೊಟ್ಟದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.
ಖೇರ್ಡಾದಲ್ಲಿ 15 ಲಕ್ಷದ ಹೈಮಾಸ್ಟ್ ದೀಪ ಕಾಮಗಾರಿ, 15 ಲಕ್ಷದ ಸಮುದಾಯ ಭವನ, ಭಂಡಾರಕುಮಟಾನಲ್ಲಿ 10 ಲಕ್ಷದ ಸಿಸಿ ರಸ್ತೆ, 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ, 5 ಲಕ್ಷದ ಸಮುದಾಯ ಭವನ, ಧೋಪರವಾಡಿಯಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಕಾಮಗಾರಿ, ಹಂದಿಕೇರಾದಲ್ಲಿ 9 ಲಕ್ಷದ ಸಮುದಾಯ ಭವನ ಮುಂದುವರೆದ ಕಾಮಗಾರಿ, ಚಿಮ್ಮೇಗಾಂವನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಕಾಮಗಾರಿ, ಮಾಳೆಗಾಂವನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ, 22.50 ಲಕ್ಷದ ಅಂಗನವಾಡಿ ಕಟ್ಟಡ, 5 ಲಕ್ಷದ ಸಿಸಿ ರಸ್ತೆ, ಭೊಪಾಳಘಡ್‌ನಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ, ಬೆಳಕೋಣಿ(ಬಿಹೆಚ್)ನಲ್ಲಿ 20 ಲಕ್ಷದ ಸಮುದಾಯ ಭವನ, ಸಂಗನಾಳ ಗ್ರಾಮದಲ್ಲಿ 14 ಲಕ್ಷದ ಶಾಲೆ ಉನ್ನತೀಕರಣ, ದುರಸ್ತಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.
ಅಹವಾಲು ಸ್ವೀಕಾರದ ವೇಳೆ ಗ್ರಾಮಸ್ಥರು ಒಬ್ಬೊಬ್ಬರಾಗಿ ತಮ್ಮ ಗ್ರಾಮದಲ್ಲಿನ ಮತ್ತು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಬಳಿಕ ಗ್ರಾಮದಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಮಾಹಿತಿ ನೀಡಿದರು. ಎಲ್ಲರ ಸಮಸ್ಯೆಗಳನ್ನು ಶಾಂತತೆಯಿಂದ ಆಲಿಸಿದ ಶಾಸಕರು, ಪಡಿತರ, ಪಿಂಚಣಿ ಸಮಸ್ಯೆ, ಬಸ್ ಸಮಸ್ಯೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಹಲವು ಸಮಸ್ಯೆಗಳಿಗೆ ಸ್ಪಂದಿಸಿದರು. ಕಾಲಮಿತಿಯಲ್ಲಿ ಕೆಲಸ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಈ ವೇಳೆ ಮಾತನಾಡಿದ ಶಾಸಕರು, ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಬೇಕು.ಗ್ರಾಮಗಳಲ್ಲಿ ಇನ್ನು ಏನೇನು ಕೆಲಸಗಳಾಗಬೇಕು ಎನ್ನುವುದನ್ನು ಖುದ್ದಾಗಿ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಇಡೀ ಕ್ಷೇತ್ರದಲ್ಲಿ ಗ್ರಾಮ ಸಂಚಾರ ನಡೆಸುತ್ತಿದ್ದೇನೆ. ಅಧಿಕಾರಿಗಳು ಜೊತೆಗೆ ಪ್ರವಾಸ ಮಾಡುತ್ತಿದ್ದು, ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸುವ ಕೆಲಸವಾಗುತ್ತಿದೆ. ಗ್ರಾಮಸ್ಥರ ಮನವಿಗಳ ಪೈಕಿ ಆದ್ಯತೆಗೆ ಅನುಗುಣ ಹಂತ ಹಂತವಾಗಿ ಎಲ್ಲ ಕೆಲಸಗಳನ್ನು ಮಾಡಿಕೊಡಲಾಗುತ್ತದೆ ಎಂದು ಭರವಸೆ ನೀಡಿದರು.ಕಂದಾಯ, ಕೃಷಿ, ತೋಟಗಾರಿಕೆ, ಜೆಸ್ಕಾಂ, ಆಹಾರ ಮತ್ತು ನಾಗರಿಕ ಸರಬರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕುಡಿಯುವ ನೀರು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಪೊಲೀಸ್, ಕೆಎಸ್‌ಆರ್‌ಟಿಸಿ, ಗ್ರಾಮ ಪಂಚಾಯಿತಿ ಸೇರಿದಂತೆ ಕೆಲವೊಂದು ಇಲಾಖೆಗಳು ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಿರುತ್ತದೆ. ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾಗಿ ಕೆಲಸ ಮಾಡಿದರೆ ಪ್ರಮುಖ ಸಮಸ್ಯೆಗಳೇ ನಿವಾರಣೆಯಾಗುತ್ತವೆ. ಹಾಗಾಗಿ ಎಲ್ಲ ಅಧಿಕಾರಿಗಳು ಗ್ರಾಮಗಳ ಅಭಿವೃದ್ಧಿಯತ್ತ ಒಲವು ತೋರಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಲಶೆಟ್ಟಿ ಚಿದ್ರೆ, ಅಮಿತಕುಮಾರ ಕುಲಕರ್ಣಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ವಸಂತ ಬಿರಾದಾರ, ಶಿವರಾಜ ಅಲ್ಮಾಜೆ, ಯಶೋಧಾಬಾಯಿ ಚವ್ಹಾಣ, ರಾಜಕುಮಾರ ಪೋಕಲವಾರ, ಯಾದವರಾವ ಸಗರ, ಮಂಜು ಸ್ವಾಮಿ, ಮೃತ್ಯುಂಜಯ ಬಿರಾದಾರ, ಅನೀಲ ಬಿರಾದಾರ, ಕೊಂಡಿಬಾ ಬಿರಾದಾರ, ಸಚಿನ ಬಿರಾದಾರ, ಸಂಜು ಪಾಟೀಲ, ಅಶೋಕ ದೇಶಮುಖ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸುಭಾಷ, ಜೆಸ್ಕಾಂ ರವಿ ಕಾರಬಾರಿ, ಆರೋಗ್ಯಾಧಿಕಾರಿ ಡಾ.ಗಾಯತ್ರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ನಿಜಶರಣ ಅಂಬಿಗರ ಚೌಡಯ್ಯ ನವರ ವಚನ ಸಮಾಜಕ್ಕೆ ಮಾದರಿ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ : ಗಂಗಮತ ಸಮಾಜದ ಪ್ರತಿಯೊಬ್ಬರೂ ಅಂಬಿಗರಚೌಡಯ್ಯನವರಜೀವನ ಚರಿತ್ರೆಯನ್ನುತಿಳಿದುಕೊಳ್ಳಬೇಕು ಮತ್ತು ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿನಂತೆ ನಾವು ಎಲ್ಲರೂ ಎಂಥದ್ದೆ ಸಮಸ್ಯೆ ಬಂದರೂ ಒಂದಾಗಿರಬೇಕು ಎಂದು ಸಮಾಜದ ಮುಖಂಡ ಮಹಾದೇವಪ್ಪ ಸಾಲಿಮನಿ ಹೇಳಿದರು.

ನಗರದನಗರಸಭೆಆವರಣದಲ್ಲಿ ತಾಲೂಕಆಡಳಿತದವತಿಯಿಂದ ನಡೆದ ನಿಜಶರಣ ಅಂಬಿಗರ ಚೌಡಯ್ಯಜಯಂತಿಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ ಸಮಾಜದಲ್ಲಿಒಗ್ಗಟ್ಟುಇರಬೇಕು.

ಯುವಸಮುದಾಯವುದೊಡ್ಡ ಸ್ಥಾನಮಾನಗಳನ್ನುಪಡೆಯಬೇಕು. ಉನ್ನತ ಹುದ್ದೆಗೇರಲು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದರು. ತಹಸೀಲ್ದಾರ್ ಉಮಾಕಾಂತ ಹಳ್ಳಿಮಾತನಾಡಿನ್ಯಾಯನಿಷ್ಠುರಿ ನಿಜಶರಣಅಂಬಿಗರಚೌಡಯ್ಯ. ಅಂಬಿಗವೃತ್ತಿಮಾಡುತ್ತಿದ್ದರೂ ತನ್ನ ಜ್ಞಾನ ದೀವಿಗೆಯಿಂದ ಜಗತ್ತಿಗೆದಿಗ್ದರ್ಶನಮಾಡಿದ್ದಾರೆ.

ಚೌಡಯ್ಯ ಅವರಿಗೆ ತಮ್ಮ ವೃತ್ತಿ ಬಗ್ಗೆ ಬಹಳ ಗೌರವಿತ್ತು. ಅದರಂತೆನಾವುಸಹಕೀಳಿರಿಮೆ ಬಿಟ್ಟು ವೃತ್ತಿಯಲ್ಲಿ ದೇವರನ್ನು ಕಾಣಬೇಕು. ವನದಲ್ಲಿ ಹುಟ್ಟು ಸಾವು ಖಚಿತ ಇದರ ನಡುವೆ ಜೀವನದಲ್ಲಿಹೇಗೆಬಾಳಬೇಕು ಎಂಬುವುದನ್ನುತೋರಿಸಿಕೊಟ್ಟಿದ್ದು ಅದರಂತೆಮುನ್ನಡೆಯಬೇಕು ಎಂದರು.

ಸಂಶೋಧಕರುಹಾಗೂಸಹಾಯಕ ಖಜನಾಧೀಕಾರಿಡಾ.ಎಮ್.ಎಸ್ ಶಿರವಾಳ ವಿಶೇಷ ಉಪನ್ಯಾಸ ನೀಡಿ ಮಾತನಾಡಿ ವೈಚಾರಿಕ ಪ್ರಜ್ಞೆಯಿಂದ ಜನ ಸಮೂಹದ ಮೌಢ್ಯವನ್ನುಹೊಡೆದೋಡಿಸಿದ ಮಹನೀಯರಲ್ಲಿ ಅಂಬಿಗರ ಚೌಡಯ್ಯಪ್ರಮುಖರು.ಸಾಮಾಜಿಕ ವಿಡಂಬನೆ ಜೊತೆಗೆ ಸಾತ್ವಿಕ ಚಿಂತನೆಗಳನ್ನುವ್ಯಕ್ತಮಾಡುವ ಸಂದೇಶಗಳನ್ನುಹೊಂದಿದ್ದವು. ಕೋಲಿಸಮಾಜದಲ್ಲಿಜನಿಸಿದ ಅನೇಕಮಹಾನ್ ನಾಯಕರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಚೌಡಯ್ಯ ಅವರ ಕುರಿತು ಅರ್ಥಗರ್ಭಿತವಾಗಿ ಮಾತನಾಡಿದರು.ಮಕ್ಕಳ ತಜ್ಞೆ ಡಾ.ಶ್ರೀದೇವಿಗಂಗನಾಳಅವರನ್ನು ವಿಶೇಷವಾಗಿಸನ್ಮಾನಿಸಲಾಯಿತು.

ಸಚಿವರಿಂದ ಭಾವಚಿತ್ರ ಮೆರವಣಿಗೆಗೆಚಾಲನೆನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಪೂಜೆ ಸಲ್ಲಿಸಿ ಗೌರವಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಪ್ರತಿ ವರ್ಷಕ್ಕಿಂತಲೂ ಈ ಭಾರಿ ವಿಶೇಷವಾಗಿಅದ್ದೂರಿಯಾಗಿ ಮೆರವಣಿಗೆನಡೆಯಿತು.ವಿವಿಧ ಕಲಾ ತಂಡಗಳು ಮೆರವಣಿಗೆ ಮೆರಗು ನೀಡಿದವು. ವಿವಿಧ ವಾದ್ಯಗಳ ನಾದದೊಂದಿಗೆ ಮೆರವಣಿಗೆ ಭಾಗವಹಿಸಿದ್ದ ಅನೇಕರು ತಾಳಕ್ಕೆ ನೃತ್ಯ ಮಾಡಿದರೆ, ಡಿಜೆ ಸೌಂಡ್‌ಗೆ ಯುವಕರುಕಿಕ್ಕಿರಿದುಕುಣಿದರು.

ಹಲವರು ಚೌಡಯ್ಯನವರ ವಚನಗಳನ್ನು ಹಾಡಿದರು. ಮೆರವಣಿಗೆಜನಮನಸೆಳೆಯಿತು. ಈ ಸಂದರ್ಭದಲ್ಲಿ ಶರಣಪ್ಪ ಸಲಾದಪುರ, ಶರಣು ಗದ್ದುಗೆ, ಸೇರಿದಂತೆ ವಿವಿಧ ಸಮಾಜದ ಮುಖಂಡರು, ಪರಶುರಾಮಮುತ್ಯಾ,ನಗರಸಭೆ ಅಧ್ಯಕ್ಷೆ ಮೆಹರೂನ ಬೇಗಂ, ಉಪಾಧ್ಯಕ್ಷೆ ಬೀಮಬಾಯಿ, ಕೋಲಿ ಕಬ್ಬಲಿಗ ಸಮಾಜದ ಹಿರಿಯಮುಖಂಡಅಯ್ಯಣ್ಣ ಕನ್ಯಾಕೊಳ್ಳೂರ, ತಾಲೂಕ ಅಧ್ಯಕ್ಷರಾಯಪ್ಪಸಾಲಿಮನಿ, ಇಒ ಬಸವರಾಜ ಶರಬೈ, ಪೌರಾಯುಕ್ತ ರಮೇಶ ಬಡಿಗೇರ,ಮುಖಂಡರಾದಸಣ್ಣ ನಿಂಗಣ್ಣನಾಯ್ಕಡಿ,ಮರೆಪ್ಪಪ್ಯಾಟಿ, ಯಲ್ಲಪ್ಪ ನಾಯ್ಕಡಿ, ಭೀಮಣ್ಣ ಶಖಾಪುರ,ರಾಮಾಂಜನೇಯ, ರಾಮಣ್ಣನಾಯ್ಕಡಿ,ಮೌನೇಶ ಹೈಯಾಳಕರ್, ಬಸವರಾಜ ಚೆಂಡು,ವೆಂಕಟೇಶಮೂಲಿಮನಿ, ಡಾ.ಷಣ್ಮುಖಪ್ಪ ಗೊಂಗಡಿ, ಮೌನೇಶಹಳಿಸಗರ,ವೆಂಕಟೇಶ ಬೋನೇರ,ಅಂಬ್ರೇಶಬೈಚಬಾಳ, ದೇವಪ್ಪಸುರಪುರಕರ್,ಲಕ್ಷ್ಮಿಕಾಂತ ನಾಕ್ಕೋಡಿ, ರಾಜು ನಾಯ್ಕಡಿ, ಯಲ್ಲಪ್ಪಮಾಸ್ತರ್ ಸೇರಿದಂತೆ ಸಮಾಜದಮುಖಂಡರು, ಯುವಕರು ಇದ್ದರು.

# ಸಿದ್ದಗಂಗಾ ಶ್ರೀಗಳ ತತ್ವಗಳೊಂದಿಗೆ ಬದುಕು ಸಾಗಿಸಿ:ಚನ್ನಪ್ಪಗೌಡ ಮೋಸಂಬಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ನಡೆದಾಡುವದೇವರು ಸಿದ್ದಗಂಗಾಮಠದಡಾ.ಶಿವಕುಮಾರ್ ಮಹಾಸ್ವಾಮಿಗಳು ಬಡಮಕ್ಕಳಿಗೆ ಬದುಕಿಗೆಬೆಳಕಾಗಿದ್ದರು.ಅವರತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಬದುಕು ಸಾಗಿಸಿಬೇಕಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷಚನ್ನಪ್ಪಗೌಡಮೋಸಂಬಿ ಅವರು ಹೇಳಿದರು.

ಅವರು ಅಖಿಲಭಾರತವೀರಶೈವ ಲಿಂಗಾಯತಮಹಾಸಭಾ,ವೀರಶೈವ ಸಮಾಜ ಹಾಗೂ ಮಹಾಸಭಾದ ಜಿಲ್ಲಾಯುವಘಟಕದವತಿಯಿಂದ ಯಾದಗಿರಿ ನಗರದ ವೀರಶೈವ ಕಲ್ಯಾಣಮಂಟಪದಲ್ಲಿಮಂಗಳವಾರ ಹಮ್ಮಿಕೊಂಡಸಿದ್ದಗಂಗಾಮಠದ ಡಾ.ಶಿವಕುಮಾರ್‌ಮಹಾಸ್ವಾಮಿಗಳ 6ನೇಪುಣ್ಯಸ್ಮರಣೆಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು. ಶ್ರೀಗಳು ಮಠದಲ್ಲಿ ಲಕ್ಷಾಂತರ ಮಕ್ಕಳಿಗೆ ಅನ್ನ,ಅಕ್ಷರ,ಆಶ್ರಯ ನೀಡಿದರು.ಅನ್ನ,ಅಕ್ಷರ,ದಾಸೋಹ ಮಾರ್ಗದಿಂದಲಕ್ಷಾಂತರಬದುಕಿಗೆ ಬೆಳಕಾಗಿದ್ದಾರೆ.ಅವರಬಡಜನರ ಕಾಳಜಿತೋರಿಅಕ್ಷರವಂತರನ್ನಾಗಿ ಮಾಡಿದ್ದಾರೆ.ಅವರುಹಾಕಿಕೊಟ್ಟ ಮಾರ್ಗದಲ್ಲಿಯೇ ಮಠದಲ್ಲಿ ಮಕ್ಕಳಿಗೆ ಶಿಕ್ಷಣ ಕಲ್ಪಿಸಲಾಗುತ್ತಿದೆ ಎಂದರು.

ಈ ವೇಳೆ ವೀರಶೈವ ಸಮಾಜದ ನಗರ ಘಟಕದ ಅಧ್ಯಕ್ಷ ಅಯ್ಯಣ್ಣ ಹುಂಡೇಕಾರ್ ಅವರು ಮಾತನಾಡಿ, ಸಿದ್ದಗಂಗಾ ಶ್ರೀಗಳು ತ್ರಿವಿಧ ದಾಸೋಹ ಮಾರ್ಗದ ಮೂಲಕ ಜ್ಞಾನದ ಬೆಳಕು ಜೊತೆ ಬದುಕಿಗೆ ದಾರಿ ತೋರಿದ್ದಾರೆ.ಸಿದ್ದಗಂಗಾ ಶ್ರೀಗಳ ಬಡವರ ಮೇಲಿದ್ದ ಕಾಳಜಿ ಹಾಗೂ ವಿಶ್ವಗುರು ಬಸವಣ್ಣನವರ ಕಾಯಕ ಮತ್ತು ದಾಸೋದ ಸಿದ್ದಾಂತಗಳು ಅವರನ್ನು ಸಿದ್ದ ಪುರುಷರನ್ನಾಗಿ ಮಾಡಿದವು. ಅವರು ತ್ರಿವಿಧ ದಾಸೋಹದ ತತ್ವದ ಮಾರ್ಗದ ಮೂಲಕ ಸೇವೆ ಮಾಡಿ ಸುದ್ದಿಯಾದರು.ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಬದುಕು ಸಾಗಿಸಬೇಕಿದೆ ಎಂದರು.

ಈವೇಳೆಕಾರ್ಯಕ್ರಮದಲ್ಲಿಯಾದಗಿರಿ ಡಿಎಚ್‌ಓ ಡಾ.ಮಹೇಶ್ ಬಿರಾದಾರ ಅವರು ಮಾತನಾಡಿ,ರಾಜ್ಯಾದ್ಯಂತ ಇಂದು ದಾಸೋಹ ದಿನವನ್ನಾಗಿ ಅಚರಣೆಮಾಡಲಾಗುತ್ತಿದೆ.ಸಿದ್ದಗಂಗಾ ಶ್ರೀಗಳುತ್ರಿವಿಧದಾಸೋಹಹಾಗೂ ಬಸವಣ್ಣನವರಕಾಯಕತತ್ವಗಳನ್ನು ಜೀವನದಲ್ಲಿಅಳವಡಿಸಿಕೊಂಡಿದರು. ಕಲಿಯುಗದ ಬಸವಣ್ಣನವರಾದ ಅವರ ಆದರ್ಶಗಳನ್ನುನಾವೆಲ್ಲರೂ ಪಾಲಿಸಿಕೊಂಡು ಬರಬೇಕಿದೆ.

ಜಿಲ್ಲಾ ಯುವ ಘಟಕದ ಅಧ್ಯಕ್ಷ ಸುರೇಶ್ ಜಾಕಾ,ತಾಲೂಕಾ ಅಧ್ಯಕ್ಷ ರಾಜಶೇಖರಗೌಡಚಾಮನಳ್ಳಿ,ಜಿಲ್ಲಾ ಕಸಾಪ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ, ಅನ್ನಪೂರ್ಣಮ್ಮಜವಳಿ,ಶರಣಪ್ಪಗೌಡ ಮಲ್ಹಾರ,ಎಸ್.ಎನ್.ಮಣ್ಣೂರು,ಶೇಖರ ಅರುಣಿ,ಬಸವರಾಜಮೊಟ್ನಳ್ಳಿ,ರಮೇಶ್ ದೊಡ್ಡಮನಿ,ಸಿದ್ದು ಅತ್ತುತ್ತಿ,ಶ್ರೀನಾಥ ಜೈನ್,ಶರಣಪ್ಪ ಗುಳಿಗಿ,ಶರಣಪ್ಪ ಜಾಕಾ,ಮೌನೇಶ ಪಾಟೀಲ, ನೂರೆಂದಪ್ಪಲೇವಡಿ,ಮಂಜುನಾಥ ಜಡಿ,ಚಂದ್ರಕಾಂತ ಕರದಳ್ಳಿ,ಶರಣು ಇಟ್ಲುರು,ವಿಶ್ವನಾಥಕಾಜಗಾರ್,ಚಂದ್ರಶೇಖರ ಸೌದರಿ,ಸಂಗಮೇಶ ದೇಸಾಯಿ, ಜಗದೀಶ ಜಾಕ ಸೇರಿದಂತೆ ಅನೇಕರು ಇದ್ದರು.

ಬೆನಕಟ್ಟಿಯಲ್ಲಿ ಗುರುವಂದನಾ ಕಾರ್ಯಕ್ರಮ

# ಭವಿಷ್ಯ ರೂಪಿಸುವ ಗುರುವಿನ ಸ್ಮರಣೆ ಅಗತ್ಯ-ಸನ್ನಪ್ಪನವರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.21-ಮಕ್ಕಳ ಭವಿಷ್ಯ ರೂಪಿಸಿ ಅವರ ಬದುಕಿಗೆ ಬೆಳಕು ನೀಡುವ ಗುರುವಿನಸ್ಮರಣೆ ಮಾಡುವುದು ಅಗತ್ಯವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾ ಅಧ್ಯಕ್ಷಪಾಂಡುರಂಗಸನ್ನಪ್ಪನವರ ಹೇಳಿದರು.

ತಾಲೂಕಿನ ಬೆನಕಟ್ಟಿಗ್ರಾಮದ ಹೇಮರಡ್ಡಿಮಲ್ಲಮ್ಮಪ್ರೌಢಶಾಲೆಯ 2001-02ನೆಯ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಮಂಗಳವಾರ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಯಾವುದೇ ಅಪೇಕ್ಷೆ ಬಯಸದೇ ತನ್ನ ಶಿಷ್ಯರ ಭವಿಷ್ಯ ರೂಪಿಸಿ ಅವರು ಉನ್ನತ ಸ್ಥಾನದಲ್ಲಿದ್ದಾಗ ಸಂತಸಪಡುವ ಮೊದಲ ವ್ಯಕ್ತಿ ಗುರು. ಅಂತಹ ವ್ಯಕ್ತಿಯ ಸ್ಮರಣೆ ಮಾಡುವುದು ಪುಣ್ಯದ ಕಾರ್ಯವಾಗುತ್ತದೆ ಎಂದು ಸಣ್ಣಪ್ಪನವರ ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಶಿಕ್ಷಕರಾದ ಆರ್.ಎಲ್. ಕಟಗೇರಿ, ಆರ್.ಎಚ್.ಕುಲಕರ್ಣಿ, ಶಿಕ್ಷಕ ಜಿ.ಜಿ.ಚಿತ್ತರಗಿ ಹಾಗೂ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಗದಿಗೆಪ್ಪ ಅರಕೇರಿ, ಗುರುವಿನ ಸ್ಮರಣೆ-ಯ ಮಹತ್ವ ತಿಳಿಸಿ, ಗುರು ಮತ್ತು ಶಿಷ್ಯರ ಸಂಬಂಧ ಮರೆಯಲಾರದಂತಹದ್ದು ಎಂದರು.

ಶೋಭಾ ಅಮಾತೆಪ್ಪನವರ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮಾಜಿ ಸೈನಿಕ ಪಿ.ಬಿ.ಮಾಚಾ ವಹಿಸಿದ್ದರು. ಶಾಲೆಯ ಮುಖ್ಯ ಶಿಕ್ಷಕ ಎಂ.ಎ.ಮುನವಳ್ಳಿ, ಹಣಮಂತ ಮಾದರ, ಪಿ.ಬಿ.ಗಂಗರಡ್ಡಿ, ಎನ್.ಬಿ.ಮದಕಟ್ಟಿ, ಎಚ್.ಬಿ.ಗೋಣಿ, ಆರತಿ ಗೋಣಿ, ಎಸ್.ಎಸ್. ಜಮಾದಾರ, ಮಹಾಂತವ್ವ ಜಮಾದಾರ, ಶಿವರಾಜ್, ಕಿರಣ ನಿಂಬಲಗುಂದಿ,ಜಿ.ಬಿ.ಲಾಯದಗುಂದಿ, ವಾಯ್.ಟಿ.ಸನಗಿನ, ಯಮನಪ್ಪ ಮಾದರಅವರನ್ನುಸನ್ಮಾನಿಸಲಾಯಿತು.

ಚೈತ್ರಾ ಹಿರೇಕುಂಬಿ ಪ್ರಾರ್ಥಿಸಿದರು. ಎಂ.ಜಿ.ವಾಲಿಕಾರ ಸ್ವಾಗತಿಸಿದರು. ಕಮಲಾ ದಾಸಪ್ಪನವರ ನಿರೂಪಿಸಿದರು. ಎಚ್.ಬಿ.ಚಲವಾದಿ ವಂದಿಸಿದರು.

# ಕಾರ್ಮಿಕರ ಮೇಲೆ ಹಲ್ಲೆ : ಮಾದಿಗ ಮಹಾಸಭಾ ಖಂಡನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.21- ಸಂಕ್ರಾಂತಿ ಹಬ್ಬಕ್ಕೆಂದು ತೆರಳಿದ ದಲಿತ ಸಮುದಾಯದ ಬಡ ಕೂಲಿ ಕಾರ್ಮಿಕರಿಗೆ ಇಟ್ಟಂಗಿ ಭಟ್ಟಿಯ ಮಾಲಿಕ ಖೇಮು ರಾಠೋಡ ಹಾಗೂ ಆತನ ಗುಂಡಾ ಗ್ಯಾಂಗ್ ಕೂಡಿಕೊಂಡು ಕೆಲಸಕ್ಕೆ ತಡವಾಗಿ ಬಂದಿದ್ದಿರೆಂದು ದುಡಿಯುತ್ತಿದ್ದ ಕಾರ್ಮಿಕರನ್ನು ಮೂರು ದಿನಗಳ ಕಾಲ ಕೂಡಿ ಹಾಕಿ ಕಬ್ಬಿಣ ಸರಳುಗಳಿಂದ ಹೊಡೆದು ಹಲ್ಲೆ ನಡೆಸಿರುವುದನ್ನು ಮಾದಿಗ ಮಹಾಸಭಾ ತೀವ್ರವಾಗಿ ಖಂಡಿಸಿದೆ. ಈ ದುಷ್ಕೃತ್ಯದ ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತುಕೊಂಡ ಇಟ್ಟಂಗಿ ಭಟ್ಟಿ ಮಾಲೀಕರು ಪರಾರಿಯಾಗಲು ಸಂಚು ನಡೆಸಿದ ಸಂದರ್ಭದಲ್ಲಿ ಪೋಲಿಸ್ ಇಲಾಖೆ ತಕ್ಷಣ ಕ್ರಮ ಕೈಗೊಂಡು ಐವರನ್ನು ಬಂಧಿಸಿ ಕಸ್ಟಡಿಗೆ ತೆಗೆದು-ಕೊಂಡಿದ್ದಕ್ಕೆ ಪೋಲಿಸ್ ಇಲಾಖೆಯ ಕ್ರಮವನ್ನು ಮಾದಿಗ ಮಹಾಸಭಾ ಸ್ವಾಗತಿಸುತ್ತದೆ ಎಂದು ನಮಹಾಸಭಾ ರಾಜ್ಯಾಧ್ಯಕ್ಷ ಮುತ್ತಣ್ಣ ಬೆಣ್ಣೂರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡ ಕೂಲಿ ಕಾರ್ಮಿಕರ ಮೇಲೆ ಅಮಾನವೀಯವಾಗಿ ಮಾರಣಾಂತಿಕ ಹಲ್ಲೆಯನ್ನು ನಡೆಸಿರುವ ಖೇಮು ರಾಠೋಡ ಗ್ಯಾಂಗ್ ಮೇಲೆ ಇಲಾಖೆ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಹಲ್ಲೆಗೊಳಗಾದ ಕೂಲಿ ಕಾರ್ಮಿಕರಿಗೆ ಜೀವನೋಪಾಯಕ್ಕಾಗಿ ಸರಕಾರ ನೆರವು ನೀಡಬೇಕು. ಜಿಲ್ಲೆಯಲ್ಲಿರುವ ಇಟ್ಟಂಗಿ ಭಟ್ಟಿಗಳು ಸೇರಿದಂತೆ ಇತರೆ ಕಾರ್ಮಿಕರನ್ನು ರಕ್ಷಣೆಗೆ ಕ್ರಮಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪ್ರತಿ ಮೂರು ತಿಂಗಳಿಗೊಮ್ಮೆ ಕಾರ್ಮಿಕ ಇಲಾಖೆ ಸಭೆ ನಡೆಸಿ ಕಾರ್ಮಿಕರ ಸ್ಥಿತಿಗತಿಯ ಬಗ್ಗೆ ನಿಗಾವಹಿಸಲು ಕ್ರಮ ಕೈಗೊಳ್ಳಬೇಕೆಂದು ಸರಕಾರಕ್ಕೆ ಮಾದಿಗ ಮಹಾಸಭಾ ರಾಜ್ಯಾಧ್ಯಕ್ಷ ಮುತ್ತಣ್ಣ ವೈ.ಬೆಣ್ಣೂರ, ಬಾಗಲಕೋಟ ಜಿಲ್ಲಾಧ್ಯಕ್ಷ ಕಾಂತಿಚಂದ್ರ ಜ್ಯೋತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಣಮಂತ ಮುತ್ತತ್ತಿ, ಜಿಲ್ಲಾ ಸಂಚಾಲಕ ಸುನೀಲ ಕಂಬೋಗಿ ಹಾಗೂ ಹಣಮಂತ ಚಿಮ್ಮಲಗಿ ಆಗ್ರಹಿಸಿದ್ದಾರೆ.

# ಕಾಯ್ದೆ ಅನುಷ್ಠಾನದಿಂದ ಕೌಟುಂಬಿಕ ಹಿಂಸೆ ತಡೆಗಟ್ಟಲು ಸಾಧ್ಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.21-ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಧಿಕಾರಿಗಳು ಕಾಯ್ದೆಯನ್ನು ಅಚ್ಚುಕಟ್ಟಾಗಿ ಜವಾಬ್ದಾರಿಯಿಂದ ನ್ಯಾಯಯುತವಾಗಿನಿರ್ವಹಿಸುವುದು ಬಹಳಷ್ಟುಅಗತ್ಯಎಂದುಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ನವನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಸ್ಥೆಯ ಗ್ರಾಮೀಣ ಪ್ರತಿಷ್ಠಾನದ ಸಭಾಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ-2005 ಅನುಷ್ಠಾನದಲ್ಲಿ ಭಾಗೀದಾರ ಇಲಾಖೆಗಳ ಪಾತ್ರ ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೌಟುಂಬಿಕ ಕಲಹಗಳು, ಗಂಡ ಹೆಂಡತಿ ಜಗಳ, ಅತ್ತೆ ನಾದಿನಿ ಮಾವ ಇವರುಗಳ ಜಗಳಗಳು ನಮ್ಮ ಸಂಪ್ರದಾಯದ ಕೌಟುಂಬಿಕ ವ್ಯವಸ್ಥೆಯಲ್ಲಿ ಮನೆಯೊಳಗೆ ಬಗೆಹರಿಯಬೇಕು. ಆದರೆ ಪೊಲೀಸ್ ಠಾಣೆ ನ್ಯಾಯಾಲಯ ಇಂತಹ ಕಡೆ ಹೋಗಬಾರದೆಂಬುದು ನಮ್ಮ ಪೂರ್ವಜರ ಕಲ್ಪನೆಯಾಗಿತ್ತು. ಕಲ್ಯಾಣ ರಾಜ್ಯದಲ್ಲಿ ಈ ಪರಿಕಲ್ಪನೆ ಬದಲಾಗಿದೆ. ಅನ್ಯಾಯ ಅನುಭವಿಸುವದು ಕೂಡ ಒಂದು ಅಪರಾಧವಾಗಿದೆ. ಈ ಕಾಯ್ದೆಯಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಕಾನೂನು ಸಂರಕ್ಷಣೆ ದೊರೆಯಲಿದೆ ಎಂದರು.

ಮುಂಬರುವ ಪೀಳಿಗೆಗೆ ಇಂತಹ ಕಾಯ್ದೆಗಳ ಮಾಹಿತಿ ಅತ್ಯಾವಶ್ಯಕ ನೀವು ಇದನ್ನ ತಿಳಿಯುವುದರ ಜೊತೆಗೆ ಸಮೂಹಕ್ಕೆ ಸಮುದಾಯಕ್ಕೆ ಈ ಕುರಿತಾದ ಮಾಹಿತಿಯನ್ನು ರವಾನಿಸುವುದು ಅತ್ಯವಶ್ಯಕ. ಕುಟುಂಬ ಸಮಾಜದ ಒಂದು ಮೂಲ ಸಂಸ್ಥೆ ಇದರಲ್ಲಾಗುವ ಬದಲಾವಣೆಗಳು, ಏರಿಳಿತಗಳು ನೇರವಾಗಿ ಸಮಾಜಕ್ಕೆ ಪರಿಣಾಮ ಬೀರುತ್ತದೆ. ಆದ್ದ-ರಿಂದ ಕುಟುಂಬದಲ್ಲಿ ತಾಳ್ಮೆ ಸಹನೆ ಸಹಬಾಳ್ವೆ ಪರಸ್ಪರ ಗೌರವಿಸೋಕೆ ಇವುಗಳು ಒಡಮೂಡಿದಾಗ ಮಾತ್ರ ಶಾಂತಿಯುತ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಜಾನಕಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ದಿವಾಣಿ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯಕಾರ್ಯದರ್ಶಿ ಚಂದ್ರಶೇಖರ್ ದಿಡ್ಡಿ ಮಾತನಾಡಿ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ಕಾಯ್ದೆಯ ಅಡಿಯಲ್ಲಿ ಒಬ್ಬ ಹಿಂಸೆಕ್ಕೊಳಗಾದ ಮಹಿಳೆಗೆ ವಾಸದ ಆದೇಶವನ್ನು ದೊರಕಿಸಿಕೊಡಲು ಸಾಧ್ಯ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ಸಿವಿಲ್ ಹಾಗೂ ಕ್ರಿಮಿನಲ್ ಎರಡೂ ಕಾಯ್ದೆಗಳಿಗೆ ಒಳಪಟ್ಟಂತೆ ಕಾರ್ಯನಿರ್ವಹಿಸುವ ಅತ್ಯಂತ ಪರಿಣಾಮಕಾರಿಯಾದ ಕಾಯ್ದೆ ಎಂದರೆ ತಪ್ಪಾಗಲಾರದು ಎಂದರು.



ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪ್ರಭಾಕರ ಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಸುಮಂಗಲಾ ಹಿರೇಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಾತ್ರೆಗಳು ಭಾವೈಕ್ಯತೆಯ ಕೇಂದ್ರ - ಹಾರಕೂಡ ಶ್ರೀ.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ; ಜ.21 ಜಾತ್ರೆಗಳು, ಉತ್ಸವಗಳು ಎಲ್ಲರ ಮನಸ್ಸನ್ನು ಒಂದುಗೂಡಿಸುವ ಭಾವೈಕ್ಯದ ಕೇಂದ್ರ ಎಂದು ಹಾರಾಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಘಾಟ ಹಿಪ್ಪರಗಾ ತಾಂಡಾದ ಶ್ರೀ ದುರ್ಗಾದೇವಿಯ 84ನೇ ಜಾತ್ರಾ ಮಹೋತ್ಸವ ಅಂಗವಾಗಿ ಏರ್ಪಡಿಸಿದ ಧರ್ಮ ಸಭೆಯ ಪಾವನ ಸನ್ನಿದಾನ ವಹಿಸಿ ಮಾತನಾಡಿದ ಶ್ರೀಗಳು, ಯಾವುದೇ ಭೇದ ಭಾವವಿಲ್ಲದೆ ದೇವರ ಹೆಸರಿನಲ್ಲಿ ಎಲ್ಲರೂ ಒಂದಾಗಿ ಭಾವ ಸುದ್ದಿಯಿಂದ ಮಾಡುವ ಆರಾಧನೆ ಹಾಗೂ ಸಂಭ್ರಮಾಚರಣೆಯ ಶುಭ ಸಂದರ್ಭವೇ ಜಾತ್ರೆ.

ಇಳೆ, ಬೆಳೆ, ಗಾಳಿ, ನೀರು ಎಲ್ಲವೂ ದೇವರು ಕೊಡಮಾಡಿದ ಭಾಗ್ಯವಾಗಿದ್ದು, ಆತನಿಗೆ ಕೃತಜ್ಞರಾಗಿರುವುದು ನಮ್ಮ ಧರ್ಮವಾಗಿದೆ.

ದುರ್ಗಾ ಮಾತೆ ಶಕ್ತಿಯ ಪ್ರತೀಕವಾಗಿದ್ದು, ನಮ್ಮ ಬದುಕಿನಲ್ಲಿ ಅನಿರೀಕ್ಷಿತವಾಗಿ ಎದುರಾಗುವ ಕಷ್ಟ, ನಷ್ಟ, ಅವಗಡಗಳನ್ನುಸಮರ್ಥವಾಗಿ, ಸಮಚಿತ್ತದಿಂದ ಎದುರಿಸಿ ಅವುಗಳಿಂದಮುಕ್ತಿಹೊಂದುವಂತೆ ಪ್ರಾರ್ಥಿಸಿದರೆ ದೇವಿ ಎಂತಹ ಸಂದರ್ಭದಲ್ಲೂ ನಮ್ಮ ಕೈ ಬಿಡುವುದಿಲ್ಲ.

ಶ್ರೇಷ್ಠ ಸಂತ ಸೇವಾಲಾಲರ ಮಾರ್ಗದರ್ಶನದಲ್ಲಿ ನಡೆಯುವ ಬಂಜಾರ ಸಮಾಜ ದೈವ ಭಕ್ತಿಯಲ್ಲಿ ಎತ್ತಿದ ಕೈ ಎಂದೇ ಹೇಳಬೇಕಾಗುತ್ತದೆ.

ದುರ್ಗಾಮಾತೆಯ ಅನುಗ್ರಹದಿಂದ ಹಾರಕೂಡದ ಲಿಂಗೈಕ ಚನ್ನಬಸವ ಶಿವಯೋಗಿಗಳ ಕೃಪೆಯಿಂದ ಎಲ್ಲರ ಬಾಳು ಸಮೃದ್ಧಿಯಿಂದ ಕೂಡಿರಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ



ಅಂಕೋಶ ಚೌವ್ಹಾಣ, ರಾಜಕುಮಾರ ರಾಠೋಡ, ಮನೋಹರ ರಾಠೋಡ, ರಾಜು ಚೌವ್ಹಾಣ, ಅಪ್ಪಣ್ಣ ಜನವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ. ಹರಸಿಂಗ್ ಸ್ವಾಗತಿಸಿದರು ಡಾಕುಸಿಂಗ್ ವಂದಿಸಿದರು.

# ದರೋಡೆಕರರ ಬಂಧಿಸುವಲ್ಲಿ ವಿಫಲವಾದ ಜಿಲ್ಲಾಡಆತದ ವಿರುದ್ಧ ದಲಿತಪರ ಸಂಘಟನೆಗಳಿಂದ 24ರಂದು ಬೃಹತ್ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.21: ಈ 16ರಂದು ನಡೆದ ಎ.ಟಿ.ಎಮ್ ದರೋಡೆ ಹಾಗೂ ಕೊಲೆ ಪ್ರಕರಣದಲ್ಲಿ ಪ್ರಾಣ ಕಳೆರದುಕೊಂಡ ಬೆಮಳಖೇಡದ ವೆಂಕಟಗಿರಿ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ 50 ಲಕ್ಷ ಪರಿಹಾರ, ಕುಟುಂಬಸ್ಥರೊಬ್ಬರಿಗೆ ಸರ್ಕಾರಿ ಉದ್ಯೋಗ ಹಾಗೂ 5 ಎಕರೆ ಭೂಮಿ ಮಂಜುರು ಮಾಡಬೇಕು ಮತ್ತು ಹೈದ್ರಾಬಾದ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಿವಕುಮಾರ ಹಳದಕೇರಿ ಅವರ ಅವರ ಆಸ್ಪತ್ರೆಯ ಸಂಪೂರ್ಣ ವೆಚ್ಚ ಸಕರ್ಶಾರವೇ ಭರಿಸಬೇಕು. ಅವರಿಗೂ 50 ಲಕ್ಷ ಪರಿಹಾರ ನೀಡಬೇಕೆಂದು ಬಹುಜನ ಸಮಾಜ ಪಕ್ಷದ ಜಿಲ್ಲಾ ಅಧ್ಯಕ್ಷ ಕಪಿಲ ಗೊಡಬೊಲೆ ಒತ್ತಾಯಿಸಿದರು.

ಮಂಗಳವಾರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬ್ಯಾಂಕ್ ದರೋಡೆ ಮತ್ತು ಕೊಲೆ ನಡೆದು ಇಂದಿಗೆ ಒಂದು ವಾರ ಕಳೆದರೂ ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೋಲಿಸರು ವಿಫಲರಾಗಿದ್ದಾರೆ. ಜಿಲ್ಲಾಧಿಕಾರಿಗಳು ಗಾಯಾಳು ಶಿವಕುಮಾರ ಅವರ ಅರೊಗ್ಯ ವಿಚಾರಿಸಲು ಹೈದ್ರಾಬಾದ್‌ಗೆ ಹೋಗಿರುವುದು ಸಂತೋಷ. ಆದರೆ, ಮೃತಪಟ್ಟ ವೆಂಕಗಿರಿ ಅವರ ಮನೆಗೆ ತೆರಳಿ ಸಾಂತ್ವನ ಹೇಳಲು ಸಹ ಹೋಗದ ಜಿಲ್ಲಾಧಿಕಾರಿಗಳು ಇಲ್ಲಿ ಮುಂದುವರೆಯಲು ಯೊಗ್ಯರಲ್ಲ. ಕೂಡಲೇ ಅವರನ್ನು ಇಲ್ಲಿಂದ ವರ್ಗಾವಣೆ ಮಾಡಬೇಕೆಂದು ಗಂಭೀರ ಆರೋಪ ಮಾಡಿದರು.

ಈ ಪ್ರಕರಣ ನಡೆದಿರುವುದು ಡಿ.ಸಿ ಕಚೇರಿ ಹಾಗೂ ಕೋರ್ಟ್ ಮಧ್ಯದಲ್ಲಿ ಹೀಗಿರುವಾಗ ಜಿಲ್ಲಾಡಳದ ವೈಫಲ್ಯ ಎದ್ದು ಕಾಣುತ್ತಿದೆ. ಕೋರ್ಟ್‌ನಲ್ಲಿ ಜನಜಂಗುಳಿ ಇದ್ದರೂ ಅಷ್ಟು ಜನಜಂಗುಳಿ ಮಧ್ಯದಲ್ಲಿಯೇ ಆರಾಮವಾಗಿ 20 ನಿಮಿಷಗಳ ಕಾಲ ತನ್ನ ಕೈಚಳಕ ಪ್ರದರ್ಶಿಸಿ ಪೋಲಿಸರಿಗೆ ಚಳ್ಳಿಹನ್ನು ತಿನ್ನಿಸಿ ಪರಾರಿಯಾಗಿರುವ ಘಟನೆ ನಿಜಕ್ಕೂ ನಾಗರಿಕ ಸಮಾಜ ತಲೆ ತಗ್ಗಿಸುವಂಥದ್ದು. ಅಂದು ಎ.ಟಿ.ಎಮ್‌ಗೆ ಹಣ ಹಾಕುವ ಸಂದರ್ಭದಲ್ಲಿ ಗನ್‌ಮ್ಯಾನ್ ಸಹ ಇರದೇ ಲೋಪ ಎಸಗಿರುವ ಎಜೆನ್ಸಿ ವಿರೂದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಗೊಡಬೊಲೆ ಆಗ್ರಹಿಸಿದರು.

ಪಕ್ಷದ ಜಿಲ್ಲಾ ಉಪಾಧ್ಯಕ್ಷ ಸಚಿನ ಗಿರಿ ಮಾತನಾಡಿ, ಬೀದರ್‌ನಲ್ಲಿ ಮೇಲಿಂದ ಮೇಲೆ ಕೊಲೆ, ಸುಲಿಗೆ, ವಂಚನೆ ಪ್ರಕರಣಗಳು ನಡೆಯುತ್ತಿದ್ದರೂ ಉಭಯ ಸಚಿವರು ಹಾರಿಕೆ ಉತ್ತರ ನೀಡಿ ಅಲ್ಲಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿರುವರು. ಇವರ ನೈತಿಕತೆ ಇದ್ದರೆ ರಾಜಿನಾಮೆ ನೀಡಬೇಕು. ಇಲ್ಲವಾದಲ್ಲಿ ಬೀದಿಗಿಳಿದು ಹೋರಾಟ ಮಾಡಲಾಗುವುದು.

ಈ ಘಟನೆಗೆ ಸಂಬಂಧಿಸಿದಂತೆ ಈ ತಿಂಗಳ 24ರಂದು ಎಲ್ಲ ದಲಿತಪರ ಸಂಘಟನೆಗಳು ಸೇರಿ ಪ್ರತಿಭಟನೆ ನಡೆಸಲಿದ್ದು, ಅದಕ್ಕೆ ಬಹುಜನ ಸಮಾಜ ಪಕ್ಷ ಕೈ ಜೋಡಿಸಲಿದೆ ಎಂದರು.

ದರೊಡೆ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡ ವೆಂಕಟಗಿರಿ ಗ್ರಾಮದವರಾದ ಚಿದ್ರಿ ಬಿ.ಶ್ಯಾಮಸುಂದರ ಭವನದ ಅಧ್ಯಕ್ಷ ರಜನೀಶ ಮುದಾಳೆ, ದಲಿತ ಯುನೈಟೆಡ್ ಮುಮೆಂಟ್ ರಾಜ್ಯಾಧ್ಯಕ್ಷ ಪ್ರಕಾಶ ರಾವಣ, ಸಂಸ್ಥಾಪಕ ಅಧ್ಯಕ್ಷರಾದ ವಿನೋದ ರತ್ನಾಕರ್ ಮಾತನಾಡಿದರು. ಬಿ.ಎಸ್.ಪಿ ಔರಾದ್ ತಾಲೂಕಾಧ್ಯಕ್ಷ ಬೀದರ್ ಮಹೇಶ ಧೋಲಾ, ಮಲ್ಲಿಕಾರ್ಜುನ್ ಕಪಲಾಪುರೆ, ಭೀಮ ಕೋರೆಗಾಂವ ಸೇನಾ ಸಮಿತಿ ಸಂಸ್ಥಾಪಕ ರವಿ ಭುಸಂಡೆ, ರಾಷ್ಟ್ರೀಯ ಭೀಮ ಯೋವಾ ಸಮಿತಿ ಸಂಸ್ಥಾಪಕ ಅಧ್ಯಕ್ಷ ರಾಜಕುಮಾರ ಪ್ರಸಾದ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.



ಬೆಳಗಾವಿ : ಬೆಳಗಾವಿಯಲ್ಲಿ ಮಹಾತ್ಮ ಗಾಂಧಿ ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ಅಗಮಿಸಿದ ಎಐಸಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ರವರಿಗೆ ಮಾಜಿ ಸಚಿವ ರಾಜಶೇಖರ ಪಾಟೀಲ ರನ್ನು ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ರವರು ಪರಿಚಯಿಸುತ್ತಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಬೀದರ್ ಸಂಸದ ಸಾಗರ ಖಂಡ್ರೆ ಹಾಗೂ ಇತರರಿದ್ದರು.

# ಮುತ್ತಂಗಿ ಇನ್ನು ನಿರಂತರ ನೀರು ಸರಬರಾಜು ಗ್ರಾಮ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 21: ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಗ್ರಾಮ ಈಗ ನಿರಂತರ ನೀರು ಸರಬರಾಜು ಗ್ರಾಮವಾಗಿದೆ.

ದಿನದ 24 ಗಂಟೆ ಶುದ್ಧ ಕುಡಿಯುವ ನೀರು ಲಭಿಸುವ ರಾಜ್ಯದ ಆರನೇ ಹಾಗೂ ಬೀದರ್ ಜಿಲ್ಲೆಯ ಎರಡನೇ ಗ್ರಾಮವೆಂಬ ಹಿರಿಮೆಗೆ ಪಾತ್ರವಾಗಿದೆ.

ಗ್ರಾಮದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಗ್ರಾಮವನ್ನು ನಿರಂತರ ನೀರು ಸರಬರಾಜು ಗ್ರಾಮವೆಂದು ಘೋಷಣೆ ಮಾಡಿದರು.

ತಮ್ಮ ಕ್ಷೇತ್ರವ್ಯಾಪ್ತಿಯ ಗ್ರಾಮ ನಿರಂತರ ನೀರು ಸರಬರಾಜು ಗ್ರಾಮ ಆಗಿರುವುದು ಸಂತಸ ಉಂಟು ಮಾಡಿದೆ. ಕ್ಷೇತ್ರದಲ್ಲಿ ಇನ್ನೂ 5 ಗ್ರಾಮಗಳನ್ನು ದಿನದ 24 ಗಂಟೆ ನೀರು ಪೂರೈಕೆ ಗ್ರಾಮಗಳನ್ನಾಗಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಗ್ರಾಮಸ್ಥರು ನೀರನ್ನು ಹಿತ ಮಿತವಾಗಿ ಬಳಸಬೇಕು. ಮಾಸಿಕ ಶುಲ್ಕ ತಪ್ಪದೆ ಪಾವತಿಸಬೇಕು. ವ್ಯವಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಬೇಕು ಎಂದು ಕಿವಿಮಾತು ಹೇಳಿದರು.

ಜಲ ಜೀವನ ಮಿಷನ್ ರಾಜ್ಯ ಯೋಜನಾ ಸಮನ್ವಯಾಧಿಕಾರಿ ಡಾ. ನಂದಕುಮಾರ ತಾಂದಳೆ ಮಾತನಾಡಿ, ಯೋಜನೆಯಡಿ ಗ್ರಾಮದ ಪ್ರತಿ ಮನೆಯ ನಲ್ಲಿಗೆ ಮೀಟರ್ ಅಳವಡಿಸಲಾಗಿದೆ. ಪ್ರತಿ ನಲ್ಲಿಗೆ ನಿಮಿಷಕ್ಕೆ 9 ಲೀಟರ್ ಶುದ್ಧ ನೀರು ಪೂರೈಕೆಯಾಗಲಿದೆ. ಪ್ರತಿ ವ್ಯಕ್ತಿಗೆ ನಿತ್ಯ 55 ಲೀಟರ್ ನೀರು ದೊರೆಯಲಿದೆ ಎಂದು ತಿಳಿಸಿದರು.

ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸ್ವಸಹಾಯ ಗುಂಪುಗಳನ್ನು ಬಳಸಿಕೊಳ್ಳಬೇಕು. ಗ್ರಾಮಸ್ಥರು ನೀರು ಪೋಲಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಹುಮನಾಬಾದ್ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಶೇಖರ್ ರಾಗಾ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಜಲಜೀವನ ಮಿಷನ್ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮದ ಜಲ ಜೀವನ ಮಿಷನ್ ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕೆ ಪ್ರಥಮ ದರ್ಜೆ ಗುತ್ತಿಗೆದಾರ ರಾಜೇಶ್ವರ ವಿ. ಗುಜ್ಜಲವಾರ್ ಅವರಿಗೆ ಪ್ರಶಂಸಾ ಪತ್ರ ಪ್ರದಾನ ಮಾಡಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಾಗಮ್ಮ ಜಗನ್ನಾಥ ಅಧ್ಯಕ್ಷತೆ ವಹಿಸಿದ್ದರು. ಜೆಜೆಎಂ ಜಿಲ್ಲಾ ಯೋಜನಾ ವ್ಯವಸ್ಥಾಪಕ ಪೆತ್ರೂ, ಎಂಜಿನಿಯ???ಗಳಾದ ಗೋರಕನಾಥ, ಪಿರಾಜಿ, ಓಂಕಾರ, ಅನಿಲ್, ಅಮರನಾಥ, ಶಶಿಕುಮಾರ, ಜಗನ್ನಾಥ ಮಜಗೆ ಇದ್ದರು.

ಪಿಡಿಒ ಸವಿತಾ ಬುಯ್ಯಾ ಸ್ವಾಗತಿಸಿದರು. ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಪರಶುರಾಮ ವಂದಿಸಿದರು.

# ಶರಣರು ಹೇಆದ ದಾರಿಯಲ್ಲಿ ಸಾಗಿದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ:ಎಡಿಸಿ ಶಿವಕುಮಾರ್ ಶೀಲವಂತ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ.21: ಶರಣ–ರು ಹೇಳಿದ ದಾರಿಯಲ್ಲಿ ನಾವು ಸಾಗಿದಾಗ ಮಾತ್ರ ನಮ್ಮ ಹಾಗೂ ಸಮಾಜ ಅಭಿವೃದ್ಧಿ ಸಾಧ್ಯವಾಗುತ್ತದೆ. ಅಂಬಿಗರ ಚೌಡಯ್ಯ ಹಾಗೂ ನಾವು ಎಲ್ಲಾ ಶರಣು ಬರೆದ ವಚನಗಳಲ್ಲಿನ ಮಹತ್ವವನ್ನು ಅರಿಯಬೇಕು. ಸಮಾಜ ಅಭಿವೃದ್ಧಿಯಾಗಬೇಕು ಎಂದರೇ ಏನು ಮಾಡಬೇಕು ಎನ್ನುವ ವಿಚಾರ ಮಾಡುವಂತಹವರು ನಾವಾಗಬೇಕಿದೆ. ನಮ್ಮಿಂದ ಸಾಧ್ಯವಾದಷ್ಟು ಅಸಹಾಯಕರಿಗೆ ಸಹಾಯ ಮಾಡಬೇಕೆಂದು ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ ಹೇಳಿದರು.



ಅವರು ಇಂದು ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಿಜ ಶರಣ ಅಂಬಿಗರ ಚೌಡಯ್ಯ ಅವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಿಜ ಶರಣ ಅಂಬಿಗರ ಚೌಡಯ್ಯ ಭವನಕ್ಕಾಗಿ ನಿವೇಶನ ಮಂಜೂರು ಮಾಡುವಂತೆ ಸಮಾಜದವತಿಯಿಂದ ಮನವಿ ಸಲ್ಲಿಸಲಾಗಿದ್ದು ಈ ಕುರಿತು ಪರಿಶೀಲನೆ ನಡೆಸಿ ಆದಷ್ಟು ಶೀಘ್ರದಲ್ಲಿ ಮಂಜೂರಾತಿಗೆ ಕ್ರಮ ವಹಿಸಲಾಗುವುದು ಎಂದರು.

ಬಸವ ಮಹಾಮನೆ ಟ್ರಸ್ಟ್ನ ಅಧ್ಯಕ್ಷ ಸಿದ್ದರಾಮ ಶರಣ–ರು ಬೆಲ್ದಾರ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಅಂಬಿಗರ ಚೌಡಯ್ಯ ನವರ ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ನ್ಯಾಯ, ನಿಷ್ಠುರದ ಮೂಲಕ ಖಂಡಿಸಿ, ಸಮಾಜದಲ್ಲಿ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಿದ್ದಾರೆ. ಸಮಾಜದ ಬಂಧುಗಳು ದುರಭ್ಯಾಸಗಳಿಗೆಬಲಿಯಾಗಬಾರದು. ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು. ಪೋಷಕರು ತಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದರು.

ಸಮಾಜದ ಮುಖಂಡ ನಾರಾಯಣರವ ಭಂಗಿ ಮಾತನಾಡಿ, ಸಮಾಜದ ಅಭಿವೃದ್ಧಿಯಾಗಬೇಕಾದರೆ ಕಾಯಕ ಮಾಡಬೇಕು, ಒಳ್ಳೆಯ ಶಿಕ್ಷಣ ಪಡೆಯಬೇಕು, ದುಂದು ವೆಚ್ಚ ಮಾಡಬಾರದು, ಒಗ್ಗಟ್ಟಾಗಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ನಿಜ ಶರಣ ಅಂಬಿಗರ ಚೌಡಯ್ಯ ಅವರ ಭಾವಚಿತ್ರ ಮೆರವಣಿಗೆಯೂ ಜಿಲ್ಲಾಧಿಕಾರಿ ಕಛೇರಿಯಿಂದ ನಗರದ ಪ್ರಮುಖ ಬಿದಿಗಳಿಂದ ಸಾಗಿ ಚನ್ನಬಸವ ಪಟ್ಟದೇವರ ರಂಗಮಂದಿರ ತಲುಪಿತು.

ಇದೇ ಸಂದರ್ಭದಲ್ಲಿ ಸಮಾಜದಿಂದ ಹೊರತಂದಿರುವ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಟೋಕರಿ ಕೋಳಿ ಸಮಾಜದ ಅಧ್ಯಕ್ಷ ಜಗನ್ನಾಥ ಜಮಾದಾರ, ಉಪಾಧ್ಯಕ್ಷ ಸುನೀಲ್ ಖಾಶಂಪುರ, ನಿಜಶರಣ ಅಂಬಿಗರ ಚೌಡಯ್ಯ ಯುವ ಸೇನೆ ಅಧ್ಯಕ್ಷ ಸುನೀಲ್ ಭಾವಿಕಟ್ಟಿ, ಶ್ರೀಕಾಂತ ಬಿ. ಕೋಲಿ, ಚಂದ್ರಕಾಂತ ಹಳ್ಳಿಖೇಡಕರ್, ಷಣ್ಮುಖಪ್ಪಾ ಶೇಖಪೂರ, ಶರಣಪ್ಪ ಅಣ್ಣಾಜಿ, ಗೋವಿಂದ ಜಾಲಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂಬಿಗರ ಚೌಡಯ್ಯನವರ ವಚನಗಳು ದಾರಿದೀಪ; ಜಿಲ್ಲಾಧಿಕಾರಿ ನಿತೀಶ್ ಕೆ.

ರಾಯಚೂರು ಜ.21: ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳು ನಮಗೆ ದಾರಿದೀಪವಾಗಿದ್ದು, ಅವರ ಆದರ್ಶಗಳನ್ನು ಪಾಲಿಸಿ ಸನ್ಮಾರ್ಗದಲ್ಲಿ ನಡೆಯೋಣ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಹೇಳಿದರು.

ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜನವರಿ 21ರ ಮಂಗಳವಾರ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂಬಿಗರ ಚೌಡಯ್ಯನವರು ವಚನಗಳ ಮೂಲಕ ನೇರ ನಿಷ್ಠುರವಾಗಿ ಮಾತನಾಡಿ ಸಮಾಜದಲ್ಲಿನ ಜಾತಿ ವ್ಯವಸ್ಥೆ, ಶೋಷಣೆ, ಮೂಢನಂಬಿಕೆ, ಹೋಗಲಾಡಿಸಲು ಶ್ರಮಿಸಿದರು. ಅವರು ರಚಿಸಿದ ವಚನಗಳು ಉತ್ತಮ ಬದುಕಿಗೆ ಹಿತನುಡಿಗಳಂತಾಗಿವೆ ಎಂದರು.

ನಮ್ಮ ಸಮಾಜದ ಜನರಲ್ಲಿ ಮೂಢನಂಬಿಕೆಗಳು ಬೇರೂರಿದ್ದು, ಇದನ್ನು ತೊಲಗಿಸಲು ಜ್ಞಾನ ಮತ್ತು ಶಿಕ್ಷಣವೇ ನಮಗೆ ರಾಮಬಾಣ ಎಂದರು.

ಈ ದಿಶೆಯಲ್ಲಿ ಪ್ರತಿಯೊಬ್ಬರು ಶಿಕ್ಷಣವಂತರಾಗದಾಗ ಮಾತ್ರ ಮೌಢ್ಯತೆ, ನಿರ್ಮೂಲನೆ ಸಾಧ್ಯ ಎಂದು ತಿಳಿಸಿದರು.

ಮಕ್ಕಳಿಗೆ ಆರಂಭದಿಂದಲೇ ಉತ್ತಮವಾದ ವಿದ್ಯಾಭ್ಯಾಸ ಕೊಡಿಸಬೇಕು. ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಯುವ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಸಮಾಜದಲ್ಲಿ ಸರ್ವ ಸಮುದಾಯದ ಜನರ ಆರ್ಥಿಕ,



ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದರು.

ನಗರದಲ್ಲಿ ಕೆರೆಗಳು ಉತ್ತಮವಾಗಿ ನಿರ್ಮಾಣವಾಗಿ ಮೀನುಗಾರಿಕೆಗೆ ಅನಕೂಲವಾಗಬೇಕಿದೆ. ಈ ದಿಶೆಯಲ್ಲಿ ಕೆರೆಗಳ ಅಭಿವೃದ್ಧಿ ಕಾರ್ಯ ಆರಂಭವಾಗಿದೆ ಎಂದರು. ಕೃಷ್ಣ ಮತ್ತು ತುಂಗಭದ್ರಾ ನದಿಯಲ್ಲಿ ಸಹ ಮೀನುಗಾರಿಕೆ ಮಾಡಲು ಉತ್ತೇಜನ ನೀಡಲಾಗುವುದು ಎಂದರು.

ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠದ ಉಪಾಧ್ಯಕ್ಷರಾದ ಕೆ.ಶಾಂತಪ್ಪ ಅವರು ಉಪನ್ಯಾಸ ನೀಡಿ, ಶರಣರ ತತ್ವಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು. ಅಂಬಿಗರ ಚೌಡಯ್ಯನವರು ಕೇವಲ ಒಂದು ಸಮಾಜಕ್ಕೆ ಮಾತ್ರ ಸೀಮಿತವಲ್ಲ, ಇಡೀ ಮನುಕುಲಕ್ಕೆ ದಾರಿ ದೀಪವಾಗಿದ್ದವರು. ತಮ್ಮ ವಚನಗಳ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ ಎಂದರು.

ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ: ದೋಣಿ ನಡೆಸುವ ಹಾಗೂ ಮೀನು ಹಿಡಿಯುವ ಅಂಬಿಗರ ಕಾಯಕದಲ್ಲಿ ಮೇಲುಕೀಳು ಎಂಬುದಿಲ್ಲ. ಮನುಷ್ಯ ಮನುಷ್ಯರ ನಡುವೆ ತಾರತಮ್ಯ ಇರಬಾರದು. ಕಾಯಕ ಆಧರಿಸಿ ಮೇಲು ಕೀಳು ಎಂದು ತಾರತಮ್ಯ ಮಾಡಿದ್ದರ ವಿರುದ್ಧ ಬಸವಾದಿ ಶರಣರು ಹೋರಾಟ ಮಾಡಿದರು. ಈ ಸಾಲಿನಲ್ಲಿ ಅಂಬಿಗರ ಚೌಡಯ್ಯ ಮೊದಲನೇ ಸಾಲಿನಲ್ಲಿ ನಿಲ್ಲುತ್ತಾರೆ. ಅದಕ್ಕೆ ಬಸವಣ್ಣನವರು ಇವರಿಗೆ ನಿಜಶರಣ ಎಂದು ಕರೆದರು ಎಂದು ವಿವರಿಸಿದರು.

ನೇರ, ನಿಷ್ಠುರವಾದಿ: ಹನ್ನೆರಡನೇ ಶತಮಾನದ ಶರಣರಲ್ಲಿ ಪ್ರಮುಖರಾಗಿರುವ ಅಂಬಿಗರ ಚೌಡಯ್ಯನವರು ನೇರ, ನಿಷ್ಠುರಿಯಾಗಿದ್ದರು. ಅವರ ವ್ಯಕ್ತಿತ್ವ ಎಂತಹದ್ದು ಎನ್ನುವುದಕ್ಕೆ ಅವರ ವಚನಗಳೇ ಸಾಕ್ಷಿ. ನಾಡಿನ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನಕ್ಕೆ ವಿಶೇಷ ಮಹತ್ವ ಇದೆ. ಆ ಕಾಲಘಟ್ಟದಲ್ಲಿ ಬಸವಣ್ಣನವರ ಸಾಮಾಜಿಕ ಕ್ರಾಂತಿಯಲ್ಲಿ ಚೌಡಯ್ಯನವರು ಭಾಗಿಯಾಗಿದ್ದರು. ನೇರ, ನಿಷ್ಠುರ ಮಾತುಗಳು, ಖಂಡಿಸುವ ಗುಣದಿಂದಲೇ ನಿಜಶರಣ ಎಂಬ ಬಿರುದು ಹೊಂದಿದ್ದರು. ವಚನಗಳ ಮೂಲಕ ತಮ್ಮ ಕಾಯಕವನ್ನು ಎತ್ತಿ ಹಿಡಿದಿದ್ದರು. ಜೊತೆಗೆ ಸ್ತ್ರೀ ಸಮಾನತೆಗೂ ಮಹತ್ವ ಕೊಟ್ಟಿದ್ದರು ಎಂದು ಉಪನ್ಯಾಸನದಲ್ಲಿ ವಿವರಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ರಾಯಚೂರು ಗ್ರೇಡ್–2 ತಹಶೀಲ್ದಾರ್ ಭೀಮರಾಯ, ನೇತಾಜಿ ನಗರ ಪೊಲೀಸ ಠಾಣೆಯ ಪಿಎಸ್ಐ ಲಕ್ಷ್ಮಿ, ಸಮಾಜದ ಮುಖಂಡರಾದ ಶರಣಪ್ಪ ಕಡಗೋಳ, ಶಿವರಾಂ, ಕಡಗೋಳ, ಆಂಜೀನೆಯ, ಶರಣಪ್ಪ, ರಾಜೇಶ್ವರಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.